# ಕೊಡಗು ಸಂಗಾತಿ

ಸಂಪಾದಕಿ : ಪಟ್ಟಡ ಶೀಲಾಮಣಿ

ಕನ್ನಡ ಮತ್ತು ಅರೆಭಾಷೆಯ ಏಕೈಕ ಪಾಕ್ಷಿಕ ಪತ್ರಿಕೆ

K.R.N.N. 240 ಸಂಪುಟ : 3 ಸಂಚಿಕೆ : 5 ಮಾರ್ಚ್ 1 ರಿಂದ 15, 1999 ಪುಟಗಳು : 24 ರೂ 5.



[ಲೇಖನ ಒಳಪುಟಗಳಲ್ಲಿ]

## ಚಿತ್ರರಂಗದಲ್ಲಿ ಅಜ್ಞಾತವಾಸದಲ್ಲಿದ್ದು ಕೊಂಡೆ ಮಿಂಚಿದ ನಟಿ
## ಅರೆಭಾಷಿಕರ ಹೆಮ್ಮೆಯ ಕುವರಿ—ಅನಿತಾರಾಣಿ



## ರಾಷ್ಟ್ರಮಟ್ಟದ ಗಣರಾಜ್ಯೋತ್ಸವ ಪಥ ಸಂಚಲನದಲ್ಲಿ ಸುಳ್ಯದ ವಿದ್ಯಾರ್ಥಿನಿ ಅನುರಾಧ ಕುರುಂಜಿ

ನೆಹರು ಸ್ಮಾರಕ ಮಹಾವಿದ್ಯಾಲಯ ಸುಳ್ಯ ಇದರ ರಾಷ್ಟ್ರೀಯ ಸೇವಾ ಯೋಜನೆಯ ಸ್ವಯಂ ಸೇವಕಿ **ಕು|| ಅನುರಾಧ ಕುರುಂಜಿಯವರು** ನವದೆಹಲಿಯಲ್ಲಿ ನಡೆದ ಗಣರಾಜ್ಯೋತ್ಸವ ಪಥಸಂಚಲನದಲ್ಲಿ ಕರ್ನಾಟಕ ರಾಜ್ಯವನ್ನು ಪ್ರತಿನಿಧಿಸಿದ್ದಾರೆ.

1998 ಜನವರಿ 26 ರಂದು ರಾಜ್ಯ ಮಟ್ಟದ ಗಣರಾಜ್ಯೋತ್ಸವ ಪಥಸಂಚಲನದಲ್ಲಿ ಭಾಗವಹಿಸಿದ ಇವರು ಮೈಸೂರಿನಲ್ಲಿ ನವೆಂಬರ್ 11 ರಂದು ನಡೆದ ಸಂದರ್ಶನದಲ್ಲಿ ಮತ್ತು ನವೆಂಬರ್ 27 ರಿಂದ ಡಿಸೆಂಬರ್ 3ರತನಕ ಚೆನ್ನೈಯಲ್ಲಿ ನಡೆದ ಪ್ರಾದೇಶಿಕ ಮಟ್ಟದ ಶಿಬಿರದಲ್ಲಿ ಆಯ್ಕೆಯಾಗಿ ಇದೀಗ ನವದೇಹಲಿಯ ರಾಜ್‌ಪಥ್‌ನಲ್ಲಿ 1999, ಜನವರಿ 26ರ ಗಣರಾಜ್ಯೋತ್ಸವ ಪಥಸಂಚಲನದಲ್ಲಿ ಭಾಗವಹಿಸಿದ್ದರು. ಕಾಲೇಜಿನ 22 ವರ್ಷಗಳ ಇತಿಹಾಸದಲ್ಲಿ ಎನ್.ಎಸ್.ಎಸ್. ಸ್ವಯಂ ಸೇವಕಿಯೊಬ್ಬರು ಮೊದಲ ಬಾರಿಗೆ ಇಂತಹ ಶಿಬಿರದಲ್ಲಿ ಭಾಗವಹಿಸಿದ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ.

ದೆಹಲಿಯಲ್ಲಿ ಜನವರಿ 1 ರಿಂದ 31ರ ತನಕ ನಡೆದ ಶಿಬಿರದಲ್ಲಿ ಭಾಗವಹಿಸಿದ ಇವರು ಪ್ರಧಾನಮಂತ್ರಿ, ರಾಷ್ಟ್ರಪತಿ, ಉಪರಾಷ್ಟ್ರಪತಿಯವರನ್ನು ಭೇಟಿಯಾಗಿದ್ದರು.

ಇವರು ಈ ರಾಷ್ಟ್ರಮಟ್ಟದ ಶಿಬಿರದಲ್ಲಿ ಭಾಗವಹಿಸಬೇಕಾದರೆ ಮಂಗಳೂರು, ಗುಲ್ಬರ್ಗ, ಬೆಂಗಳೂರು, ಮೈಸೂರು, ಚೆನ್ನೈಗಳಲ್ಲಿ ಐದು ಶಿಬಿರಗಳನ್ನು ಮತ್ತು ಸಂದರ್ಶನಗಳನ್ನು ಎದುರಿಸಬೇಕಾಯಿತು. 'ನಮ್ಮಲ್ಲಿ ಸಾಧಿಸುವ ಛಲ ಮತ್ತು ಜನರ ಸಹಕಾರ ಪ್ರೋತ್ಸಾಹಗಳಿದ್ದರೆ ಏನು ಬೇಕಾದರೂ ಸಾಧಿಸಬಹುದು ಎಂದು ಹೇಳುವ ಇವರು ಎನ್. ಎಸ್. ಎಸ್ ನಲ್ಲಿ ಉತ್ತಮ ಸಾಧನೆ ಮಾಡಬೇಕೆಂದಿದ್ದ ನನ್ನ ಕನಸು ಇಂದು ನನಸಾಯಿತು' ಎನ್ನುತ್ತಾರೆ. ಎನ್. ಎಸ್. ಎಸ್.ನಲ್ಲಿ 7 ಶಿಬಿರಗಳಲ್ಲಿ ಭಾಗವಹಿಸಿದ ಅನುಭವ ಇವರದು.

ಬಿಳಿಯಾರು, ಅರಂತೋಡುಗಳಲ್ಲಿ ವಿದ್ಯಾಭ್ಯಾಸವನ್ನು ಮುಗಿಸಿ ಪ್ರಸ್ತುತ ಎನ್. ಎಂ. ಸಿ.ಯ ತೃತೀಯ ಬಿ.ಎ. ಯಲ್ಲಿ ಕಲಿಯುತ್ತಿರುವ ಕು|| ಅನುರಾಧ ಕುರುಂಜಿಯವರು ಎನ್.ಎಸ್.ಎಸ್. ಘಟಕದ ನಾಯಕಿಯಾಗಿ ಸಾಂಸ್ಕೃತಿಕ ಸಂಘದ ಕಾರ್ಯದರ್ಶಿಯಾಗಿ, ಕಾಲೇಜಿನ ಹಾಗೂ ವಿಶ್ವವಿದ್ಯಾಲಯ ಮಟ್ಟದ ಸಾಹಿತ್ಯಕ, ಸಾಂಸ್ಕೃತಿಕ, ಆಟೋಟ ಸ್ಪರ್ಧೆಗಳಲ್ಲಿ ಕಾಲೇಜನ್ನು ಪ್ರತಿನಿಧಿಸಿ ಹಲವಾರು ಪ್ರಶಸ್ತಿಗಳನ್ನು ತಂದುಕೊಟ್ಟಿದ್ದಾರೆ. ವಿದ್ಯಾರ್ಥಿ ದೆಸೆಯಲ್ಲಿ ಒಂದು ಕೃತಿಯನ್ನು ಹೊರತಂದಿರುವ ಸಾಧನೆ ಇವರದು. ಇವರು ಅರಂತೋಡಿನ ಕುರುಂಜಿ ಪದ್ಮಯ್ಯಗೌಡ ಮತ್ತು ಶ್ರೀಮತಿ ಸೀತಮ್ಮ ದಂಪತಿಗಳ ಪುತ್ರಿಯಾಗಿ 20-2-78ರಂದು ಅರಂತೋಡಿನ ಕುರುಂಜಿಯಲ್ಲಿ ಜನಿಸಿದರು.

**—ಸಂಗಾತಿ ವರದಿ**

# ಕೊಡಗು ಸಂಗಾತಿ

ಸಂಪಾದಕಿ, ಪ್ರಕಾಶಕಿ :
**ಪಟ್ಟಡ ಪಿ. ಶೀಲಾಮಣಿ**
ಗೌರವ ಸಂಪಾದಕ :
**ಪಟ್ಟಡ ಎಂ. ಪ್ರಭಾಕರ**
ಮುದ್ರಕರು :
**ಮಣ್ಣಂಡ್ರ ಕೆ. ತಮ್ಮಯ್ಯ**

ಚಂದಾ ಕಳುಹಿಸುವ ಮತ್ತು
ಜಾಹೀರಾತು ಪ್ರಸಾರ ಕಛೇರಿ :
**ಕೊಡಗು ಸಂಗಾತಿ**
ನಂ. 35, "ಸವಿತಾ ನಿಲಯ"
1ನೇ ಕ್ರಾಸ್, 4ನೇ ಬ್ಲಾಕ್,
ಡಿವಿಜನಲ್ ಟೆಲಿಕಾಂ ಕಛೇರಿ ಹತ್ತಿರ,
ಜಯಲಕ್ಷ್ಮಿಪುರಂ, ಮೈಸೂರು-12.
ಫೋನ್ : 0821/516771

**-ಸಂಪರ್ಕಿಸುವ ವಿಳಾಸ-**

**ಮಣಿ ನಂಗಾರ್**
C/o ನಂಗಾರ್ ಆಡಿಯೋ & ವೀಡಿಯೋ
ಹೊಳ್ಳ ಕಾಂಪ್ಲೆಕ್ಸ್, ಮಂಗಳೂರು ರಸ್ತೆ,
ಚಿಕ್ಕಪೇಟೆ, ಮಡಿಕೇರಿ-571 201
ದೂರವಾಣಿ : 08272/29372

**ಬೈತಡ್ಕ ಜಾನಕಿ ಬೆಳ್ಯಪ್ಪ**
ನಂ. 16, ಎಲ್.ಐ.ಸಿ. ಹತ್ತಿರ
ರೇಸ್ ಕೋರ್ಸ್ ರಸ್ತೆ, ಮಡಿಕೇರಿ
ದೂರವಾಣಿ : 08272/28047

**ಕುಂಭಗೌಡನ ಸೋಮಣ್ಣ**
ಮಯೂರ ಕೋಲ್ಡ್ ಸ್ಟೋರೇಜ್
ಮುಖ್ಯ ರಸ್ತೆ, ಕುಶಾಲನಗರ-571234

**ಅಮ್ಮಾಜೀರ ಪೊನ್ನಪ್ಪ ಅಥವಾ**
**ಕಲ್ಲುಮುಟ್ಲು ಬಸಪ್ಪ**
20, 1ನೇ ಮೈನ್, 4ನೇ ಕ್ರಾಸ್
ಸಾಕಮ್ಮ ಗಾರ್ಡನ್, ಬಸವನಗುಡಿ,
ಬೆಂಗಳೂರು-04
ದೂರವಾಣಿ-080/6549669


## ಒಳನೋಟ

ಪುಟಗಳು


- ಸಂಪಾದಕೀಯ 2
- ಕೊಡಗು ಗೌಡ ಜನಾಂಗದ ಪ್ರಥಮ ಚಿತ್ರನಟಿ ಅನಿತಾರಾಣಿ 3
- ಮೂರ್ಖರೋ ನಾವು ಮೂರ್ಖರು ! 4
- ಯುವಕರು ತಮ್ಮ ಭವಿಷ್ಯವನ್ನು ತಾವೇ ರೂಪಿಸಿಕೊಳ್ಳುವ ಬಗೆ ಹೇಗೆ? 5
- ಗೌಡರ ವಿವಾಹ ಪದ್ಧತಿಗಳ ಅವಲೋಕನ 7
- ಆರೋಗ್ಯ ಚಿಂತನ : ಎದೆಹಾಲಿನ ಪ್ರಾಮುಖ್ಯತೆ 8
- ಕವನ 9
- ಸರ್ಪಗಂಧ ! ಧಾರವಾಹಿ-1 10
- ಕುಶಾಲನಗರದಲ್ಲಿ ವಿಜೃಂಭಿಸಿದ ಗೌಡ ಜನಾಂಗದ ಸಂತೋಷ ಕೂಟ 12
- ಗೌಡರ ಪದ್ಧತಿಗಳು 13
- ನಿಮ್ಮ ಪತ್ರಗಳು 14


## ಅರೆ ಭಾಷೆಶ ವಿಭಾಗ


- ಕರಿಚಿನ್ನ ಧಾರಾವಾಹಿ-22 15
- ಸುಬ್ಬನ ಕೆಲ್ಸದ ದಿನಚರಿ 17
- ನಾಸ್ ಅಂಜಣ ಹಾಕಿದ್ 18
- ಕೋಳಿನ ಕೇಳಿ ಸಂಬಾರ ಅರಿಯೊಕಾ 19
- ಕ್ಲಾಸ್‌ಲಿ ನಾನಿರ್ಕನ ಒಮ್ಮೆ ನಡ್ದ ಪ್ರಸಂಗ 20



**ಚಂದಾ ವಿವರ**

| | | |
|---|---|---|
| ಬಿಡಿ ಪ್ರತಿ | : | 5 ರೂ. |
| ಅರ್ಧ ವಾರ್ಷಿಕ | : | 60 ರೂ. |
| ವಾರ್ಷಿಕ ಚಂದಾ | : | 120 ರೂ. |

# ಸಂಪಾದಕೀಯ :

## ಮಗುವಿನ ಮನಸ್ಸು

ಒಂದು ಮಗುವಿನ ವ್ಯಕ್ತಿತ್ವವನ್ನು ರೂಪಿಸಲು ಮನೆಯೇ ಪ್ರಥಮ ಶಾಲೆ. ಅದರಲ್ಲೂ ತಾಯಿಯ ಪಾತ್ರ ಬಹಳ ಮುಖ್ಯ. ಆದ್ದರಿಂದಲೇ ನಮ್ಮ ಹಿರಿಯರು 'ತೊಟ್ಟಿಲ ತೂಗಿದ ಕೈಯ್ಯೇ ಸಾಮ್ರಾಜ್ಯವಾಳುವ ಕೈ' ಎಂಬುದಾಗಿ ಹೇಳಿರುವುದು. ತಾಯಿಯಾಗುವವಳು ತಾಯಿಯಾಗುವುದಕ್ಕೆ ಮೊದಲೇ ಮಗುವಿನ ಗರ್ಭಿಣಿಯಲ್ಲಿಯೇ ತನಗೆ ಹುಟ್ಟುವ ಮಗು ಗಂಡಾದರೆ ಶ್ರೀರಾಮನಂತಹ ಮಹಾಪುರುಷನಾಗಬೇಕು, ಅರ್ಜುನನಂತಹ ವೀರ, ಧೀರನಾಗಿರಬೇಕು. ಹರಿಶ್ಚಂದ್ರನಂತಹ ಸತ್ಯವಂತನಾಗಬೇಕು. ಬುದ್ಧನಂತಹ, ರಾಮಕೃಷ್ಣ ಪರಮಹಂಸನಂತಹ, ಶ್ರೀ ಶಂಕರಾಚಾರ್ಯನಂತಹ ತತ್ವಜ್ಞಾನಿಯಾಗಿರಬೇಕು ಎಂಬ ಭಾವನೆಯನ್ನು ಮಾಡಿದ್ದರೆ ಅವರಂತವರಲ್ಲದಿದ್ದರೂ ಸ್ವಲ್ಪ ಮಟ್ಟಿಗಾದರೂ ಮೇಲೆ ಹೇಳಿದ ಗುಣಗಳುಳ್ಳ ಗಂಡುಮಗು ಹುಟ್ಟಬಹುದೆಂಬುದು ಮನಶಾಸ್ತ್ರಜ್ಞರ ಅಭಿಪ್ರಾಯ. ಅದೇ ರೀತಿ ಹೆಣ್ಣು ಮಗುವಾಗುವುದಾದರೆ ಸೀತೆಯಂತಹ ಪತಿವ್ರತೆ, ಲಕ್ಷ್ಮೀಬಾಯಿಯಂತಹ ವೀರಸ್ತ್ರೀ, ಸುಬ್ಬಲಕ್ಷ್ಮಿಯಂತಹ ಸಂಗೀತಗಾರ್ತಿಯಾಗಬೇಕೆಂದು ಯೋಚಿಸಿದರೆ ಅವರುಗಳ ಗುಣಗಳಲ್ಲಿ ಸ್ವಲ್ಪಮಟ್ಟಿಗಾದರೂ ಬರಬಹುದು. ತಾಯಿಯಾದವಳು ಮಗುವನ್ನು ಪೋಷಿಸುವ ಆ ಮಗುವನ್ನು ಒಳ್ಳೆಯ ಮಾರ್ಗದಲ್ಲಿ ನಿರ್ದೇಶಿಸುವ ಮಹಾನ್ ಜವಾಬ್ದಾರಿ ತಾಯಿಯದು.

ಹಿರಿಯರು ಮಗುವನ್ನು ಬೈಯ್ಯುವಾಗ ಕೆಟ್ಟ ಪದಗಳನ್ನು ಉಪಯೋಗಿಸಿ ಬೈಯ್ಯುವುದರಿಂದ ಮಗುವೂ ಸಹ ಅದೇ ಶಬ್ದವನ್ನು ಕಲಿತು ಬೇರೆ ಮಗುವಿಗೆ ಬಯ್ಯಲು ಕಲಿಯುತ್ತದೆ. ಉದಾ : ಸೂಳೆಮಗ, ಅವ್ವನ..., ಪಾಪುರು, ಸುಟ್ಟಂವ, ದೊಂದೆಕಟ್ಟಕೆ, ನಿನ್ನ ಬೊಜ್ಜಕೆ, ನಿನ್ನ ಸಾವು, ನಿನ್ನ ಮಣ್ಣುಮುಕ್ಕಿಕ, ಚೆಂಡು, ಮಿಣಕೆ, ಪಾಸಾಡಿ, ಬೊಸುಡಿ, ರ್‍ಯಾಸ್ಕಲ್, ಪಿಲಿಯಾಡ್ಚಿ, ಸೂಳೆ ಮುಂಡೆ ಇತ್ಯಾದಿ ಇತ್ಯಾದಿ. ಹಿರಿಯರು ಜಗಳವಾಡುವಾಗ ಮಗುವಿನ ಎದುರಿನಲ್ಲಿಯೇ ಜಗಳವಾಡುವುದು. ಕುಡಿತದ ಚಟ ಇರುವವರು ಮಕ್ಕಳಿದ್ದಾಗಲೇ ಕುಡಿಯುವುದು ಅಥವಾ ಮಗುವಿಗೂ ಕುಡಿಯುವುದಕ್ಕೆ ಕೊಡುವುದು ಇವೆಲ್ಲಾ ದುಶ್ಚಟಗಳನ್ನು ಮಗುವು ಕಲಿಯುತ್ತದೆ.

ದೂರದರ್ಶನ ಬಂದಮೇಲೆ ನಮ್ಮ ಸಂಸ್ಕೃತಿಯ ಮೇಲೆ ಪ್ರತಿದಿನ ಬಾಂಬ್ ಎಸೆಯುತ್ತಿದ್ದಾರೆ. ಹಿರಿಯರೇ ಡಿಸ್ಕೋ ಡ್ಯಾನ್ಸ್ ಅಶ್ಲೀಲ ಧಾರಾವಾಹಿಗಳಿಗೆ ಪ್ರೋತ್ಸಾಹ ನೀಡಿ ಅದನ್ನೆ ನೋಡುತ್ತಿರುತ್ತಾರೆ. ಡಿಸ್ಕವರಿ ಚಾನಲ್‌ನಂತಹ, ಯು.ಜಿ.ಸಿ. ಕಾರ್ಯಕ್ರಮಗಳಂತಹ, ಸಂಗೀತ ಕಲೆಗಳನ್ನು ಪ್ರದರ್ಶಿಸುವ ಚಿತ್ರಗಳನ್ನು ನೋಡುವಂತೆ ಅಭ್ಯಾಸ ಮಾಡಬೇಕು. ಯಾರಿಗೂ ದೇಶದ ವಿಷಯ ತಿಳಿಯುವ ವಾರ್ತೆಗಳನ್ನು ಕೇಳುವ ಅಭಿಲಾಷೆಯೇ ಇಲ್ಲದಾಗಿದೆ. ನಮ್ಮ ಸಂಸ್ಕೃತಿಯೇ ಆಗಲಿ, ಹಿಂದೂ ಸಂಸ್ಕೃತಿಯೇ ಆಗಲಿ ನಿಧಾನವಾಗಿ ಕಾಡು ಪಾಲಾಗುವ ದಿನಗಳು ಬಹುದೂರವಿಲ್ಲ. ಶ್ರೀಮಂತನಿಂದ ಹಿಡಿದು ಬಡವನ ತನಕ ಈ ಪಾಶ್ಚಾತ್ಯ ಅನುಕರಣೆಗೆ ಒಂದಲ್ಲ ಒಂದು ರೀತಿಯಲ್ಲಿ ಪರೋಕ್ಷವಾಗಿ ದಾಸರಾಗುತ್ತಾ ಬರುತ್ತಿದ್ದಾರೆ. ಇದೆಲ್ಲಾ ಮುಗ್ಧ ಮಗುವಿನ ಮನಸ್ಸಿನ ಮೇಲೆ ಪರಿಣಾಮ ಬೀರುವುದಿಲ್ಲವೆ ?

ಸುಸಂಸ್ಕೃತ ಮೇಲ್ಮಟ್ಟದ ಸಮಾಜದ ಅಡಿಪಾಯಕ್ಕೆ ಇವೆಲ್ಲಾ ಅವಶ್ಯಕವಲ್ಲವೇ ಎಂದು ಸಂಗಾತಿಯ ಚಿಂತನೆ.

---

### ಗೌಡ ಜನಾಂಗದವರಲ್ಲಿ ವಿನಂತಿ :

## ಭಿನ್ನಾಭಿಪ್ರಾಯವಿಲ್ಲದೆ ಎಲ್ಲರೂ ಗೌಡರೆನ್ನಬೇಕು

ಕೊಡಗು ಮತ್ತು ದಕ್ಷಿಣ ಕನ್ನಡ ಗೌಡ ಜನರು ಕೊಡಗು ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಹೊರಗೆ ಬಂದು ತಮ್ಮ ಜೀವನವನ್ನು ಸಾಗಿಸುತ್ತಿರುವವರ ಮಕ್ಕಳಿಗೆ ಜಾತಿ ಸರ್ಟಿಫಿಕೇಟು ಪಡೆಯುವ ಹಾಗೂ ಅವರ ಮಕ್ಕಳನ್ನು ಶಾಲೆಗಳಲ್ಲಿ ಪ್ರಥಮವಾಗಿ ಸೇರಿಸುವಾಗ ಜಾತಿಯ ವಿಷಯ ಹೇಗೆ ಕೊಡಬೇಕು ಎಂಬ ವಿಷಯ ಅವರ ಮನಸ್ಸಿನ ಸಂಶಯವನ್ನು ಹೋಗಲಾಡಿಸಲು ಎಷ್ಟೋ ಜನ ನನ್ನನ್ನು ಕೇಳಿದಾಗ ನಾನು ಹೇಳಿದ್ದು ಇಷ್ಟೆ.

ನಾವು ಜಾತಿಯ ವಿಷಯ ಅರ್ಜಿ ಕೊಟ್ಟಾಗ ಅಥವಾ ನಿಮ್ಮ ಮಗುವನ್ನು ಶಾಲೆಗೆ ಸೇರಿಸುವಾಗ **"ಗೌಡ"** ಎಂಬುದಾಗಿ ಮಾತ್ರ ಬರೆಯಬೇಕು. ಅದಲ್ಲದೆ **ಕೊಡಗು ಗೌಡ, ಸುಳ್ಯದ ಗೌಡ, ದಕ್ಷಿಣ ಕನ್ನಡ ಜಿಲ್ಲೆಯ ಗೌಡ** ಎಂಬುದಾಗಿ ಹೇಳುವುದಾಗಲೀ, ನೀವು ಒಕ್ಕಲಿಗರೆಂದು ಹೇಳುವುದಾಗಲೀ ಮಾಡಬಾರದು. ಯಾಕೆಂದರೆ ನಮ್ಮ ಜಿಲ್ಲೆಗಳಲ್ಲಿ ಕಂದಾಯ ಇಲಾಖೆಯಲ್ಲಾಗಲೀ ಅಥವಾ ವಿದ್ಯಾ ಇಲಾಖೆಯ ದಾಖಲೆಗಳಲ್ಲಿ **"ಗೌಡ"** ಎಂಬುದಾಗಿ ಮಾತ್ರ ಇರುವುದರಿಂದ ಬೇರೆ ಯಾವುದೇ ವಿಶೇಷಕ ಶಬ್ದಗಳನ್ನು ಸೇರಿಸಬಾರದೆಂದು ಕೇಳಿಕೊಳ್ಳುತ್ತೇನೆ.

**—ಪ್ರೊ॥ ಪೂಜಾರಿ ಮೊಣ್ಣಪ್ಪ, ಬೆಂಗಳೂರು**

# ಕೊಡಗು ಗೌಡ ಜನಾಂಗದ ಪ್ರಥಮ ಚಿತ್ರನಟಿ ಅನಿತಾರಾಣಿ

ಕೊಡಗು ನಾಡಿನ ಚೆಟ್ಟಳ್ಳಿಯಲ್ಲಿ ವಾಸವಾಗಿರುವ ಕುಯ್ಯಮುಡಿ ಗಣಪತಿ ಮತ್ತು ಹೊಸೊಕ್ಲು ತಂಗಮ್ಮ ದಂಪತಿಗಳ 3 ಗಂಡು ಒಂದು ಹೆಣ್ಣು ಮಕ್ಕಳಲ್ಲಿ ಅನಿತಾರವರು ಹಿರಿಯವಳು. 1968 ರ ಆಗಸ್ಟ್ 10 ರಂದು ಪಿರಿಯಾಪಟ್ಟಣದಲ್ಲಿ ಜನಿಸಿದ ಅನಿತಾ ರಾಣಿಯವರು ಅಲ್ಲಿಯೇ ವಿದ್ಯಾಭ್ಯಾಸ ಮುಗಿಸಿ, ನಂತರ ಬೆಂಗಳೂರಿನ ಖಾಸಗಿ ಗ್ರಾನೈಟ್ ಕಾರ್ಖಾನೆಯಲ್ಲಿ ಉದ್ಯೋಗಿಯಾದರು. ಅನಂತರ ಮಾಡೆಲಿಂಗ್‌ನಲ್ಲಿ ಅವಕಾಶ ಸಿಕ್ಕಾಗ ಪ್ರಥಮವಾಗಿ ವಿಜಯಲಕ್ಷ್ಮಿ ಸಿಲ್ಕ್ ಹೌಸ್‌ನಲ್ಲಿಯೂ, ಡಿಕ್ಸಿ ಕೋಲಾದಲ್ಲಿಯೂ, ಸ್ಪ್ರಿಂಟ್ ಸಾಫ್ಟ್ ಡ್ರಿಂಕ್ಸ್‌ನಲ್ಲಿಯೂ ಹೀಗೆ ಮಾಡೆಲಿಂಗ್ ಮಾಡುತ್ತಿದ್ದಾಗ ಒಬ್ಬರು ಫಿಲ್ಮ್ ನಿರ್ದೇಶಕರ ಪರಿಚಯವಾಗಿ, 1989 ರಲ್ಲಿ ಪ್ರಥಮವಾಗಿ ಅಪ್ಪು ಚಿತ್ರದಲ್ಲಿ ನಾಯಕಿ ನಟಿಯಾಗಿ ಅಭಿನಯಿಸಿದರು. ಬನ್ನಾಂಜಿ ಎಂಬ ತುಳು ಚಿತ್ರದಲ್ಲಿ ಸುಧಾಕರ್ ಜೊತೆ ನಾಯಕಿಯಾಗಿ ಅಭಿನಯಿಸಿದ್ದಾರೆ. ಶಾಂಭವಿ ಎಂಬ ಸಿನಿಮವು ಕನ್ನಡ, ತಮಿಳು, ತೆಲಗು ಭಾಷೆಯಲ್ಲಿ ಚಿತ್ರಿತವಾಗಿ ಅದರಲ್ಲಿಯೂ ಸಹನಾಯಕಿಯಾಗಿ ಅಭಿನಯಿಸಿದ್ದಾರೆ. ಅತ್ತೆಮಗಳು ಚಿತ್ರದಲ್ಲಿ ನಾಯಕಿಯಾಗಿ ಶ್ರೀಧರ್ ಜೊತೆ ನಟಿಸಿರುವರು. ಗಂಧದಗುಡಿ ಭಾಗ–2, ಪ್ರೇಮ ಸಂಗಮ, ಅವತಾರ ಪುರುಷದಲ್ಲಿ ಅಂಬರೀಷ್ ಜೊತೆ ಸಹ ನಾಯಕಿಯಾಗಿ ನಟಿಸಿದ್ದಾರೆ. ಅನುರಾಗ ದೇವತೆಯಲ್ಲಿ ಶಶಿಕುಮಾರ್ ಜೊತೆ ಸಹ ನಾಯಕಿ ನಟಿಯಾಗಿಯೂ, ಗಜಪತಿ ಗರ್ವಭಂಗದಲ್ಲಿ ರಾಘವೇಂದ್ರ ರಾಜ್‌ಕುಮಾರ್ ಜೊತೆ ಸಹನಾಯಕಿಯಾಗಿಯೂಹೀಗೆ ಸುಮಾರು ನಲವತ್ತಕ್ಕಿಂತಲೂ ಹೆಚ್ಚು ಚಿತ್ರದಲ್ಲಿ ನಟಿಸಿ ಅನುಭವ ಪಡೆದಿದ್ದಾರೆ.

ತನ್ನ ಪತಿ ಡಾ|| ನಿರಂಜನ್‌ಕುಮಾರ್ ಜೊತೆ ಸಂಗಾತಿ ಕೇಳಿದ ಪ್ರಶ್ನೆಗಳಿಗೆ ಯಾವ ಸಂಕೋಚವಿಲ್ಲದೆ ಉತ್ತರಿಸಿದರು. ನಿರಂಜನ್‌ಕುಮಾರ್ ಅವರು ಸಹ ಟಿ. ವಿ. ಸೀರಿಯಲ್‌ನಲ್ಲಿ ನಟಿಸುತ್ತಿದ್ದಾಗ, ಇವರಿಬ್ಬರಿಗೆ ಪ್ರೇಮಾಂಕುರವಾಗಿ 1996ರಲ್ಲಿ ಮದುವೆ ಆಯಿತು. ನಿರಂಜನ್‌ರವರು ಆಂಧ್ರದ ವಿಜಯವಾಡದವರು. ನಿಜ ಜೀವನದಲ್ಲಿ ವೈದ್ಯರಾಗಿರುವ ಇವರು ಬೆಂಗಳೂರಿನ ರಾಮಯ್ಯ ಆಸ್ಪತ್ರೆಯಲ್ಲಿ ಉದ್ಯೋಗಿಯಾಗಿದ್ದು ಸಮಾಜದ ಕಡು ಬಡಜನರಿಗಾಗಿ ತಮ್ಮ ಜೀವನವನ್ನು ಮುಡುಪಾಗಿಟ್ಟು ವಿಶೇಷ ರೀತಿಯಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.

ಡಾ|| ನಿರಂಜನ್‌ರವರು ಸಿನಿಮಾರಂಗವಲ್ಲದೆ, ಟಿ. ವಿ. ರಂಗದಲ್ಲಿಯೂ ನಟಿಸಲು ಅನಿತಾರಾಣಿಯವರಿಗೆ ಸಾಕಷ್ಟು ಪ್ರೋತ್ಸಾಹ ನೀಡುತ್ತಿದ್ದಾರೆ. ನಿರಂಜನ್‌ರವರು ಬೆರತು ಬಾಳೋಣ, ನವ ಜೀವನ ಹೀಗೆ ಹಲವಾರು ಟಿ.ವಿ. ಸೀರಿಯಲ್‌ನಲ್ಲಿ ವೈದ್ಯರಾಗಿ ನಟಿಸಿದ್ದಾರೆ. ಸಮಾಜದಲ್ಲಿ ತಮ್ಮದೆ ಆದ ಗಂಧರ್ವ ಕಲಾವೃಂದ ಎಂಬ ನೃತ್ಯ ವೃಂದದಿಂದ ಬರುವ ಹಣವನ್ನು 'ನವಚೇತನಾ' ಎಂಬ ಶಿರೋನಾಮೆಯಡಿಯಲ್ಲಿ ಮಾನಸಿಕ ಅಸ್ವಸ್ಥರಾಗಿರುವ ಮಕ್ಕಳಿಗೆ ಸಹಾಯಧನವಾಗಿ ನೀಡುತ್ತಿದ್ದಾರೆ. ಅನಿತಾರಾಣಿಯವರು ಬೆಂಗಳೂರಿನ ಕಾವೇರಿ ನಾಡಿನ ಮಕ್ಕಳಿಗಾಗಿ ಆಟದ ಸಾಮಾನುಗಳನ್ನು ಧಾನವಾಗಿ ನೀಡಿದ್ದಾರೆ. ಇವರು ನಮ್ಮ ಜನಾಂಗದ ಸಂಘಟನೆಯನ್ನು ಕಾವೇರಿ ನಾಡಿನಲ್ಲಿ ಕಂಡಾಗ ಇವರ ಆನಂದಕ್ಕೆ ಪಾರವೆ ಇಲ್ಲವೆನ್ನುತ್ತಾರೆ. ಇವರನ್ನು ಕಿರುಕಾಣಿಕೆಯೊಂದಿಗೆ ಕಾವೇರಿ ನಾಡಿನಲ್ಲಿ 1998ರ ಸಪ್ಟೆಂಬರ್‌ನಲ್ಲಿ ಸನ್ಮಾನಿಸಲಾಗಿದೆ. ಜನಾಂಗಕ್ಕೆ ತನ್ನ ಹಿತನುಡಿಯೆಂದರೆ ಉತ್ತಮ ಕೆಲಸವನ್ನು ಸಾಧಿಸಿಕೊಂಡು, ಜನಾಂಗದ ಹೆಸರು ಮುಂದೆ ತರುವಲ್ಲಿ ಪ್ರಯತ್ನಿಸಿ ಮುನ್ನಡೆಯುವುದೇ ನನ್ನ ಆಸೆಯಾಗಿದೆ ಎಂದು ಮನಬಿಚ್ಚಿ ತಿಳಿಸಿದರು. ಹಾಗೆಯೇ ಮೊಟ್ಟ ಮೊದಲ ಬಾರಿಗೆ ನಮ್ಮದ ಪತ್ರಿಕೆ "ಕೊಡಗು ಸಂಗಾತಿ" ನನ್ನನ್ನು ಅರೆಭಾಷಿಕ ಲೋಕಕ್ಕೆ ಪರಿಚಯಿಸುತ್ತಿರುವುದು ನನಗೆ ನಿಜಕ್ಕೂ ಹೆಮ್ಮೆಯಾಗಿದೆ. ಇಂತಹ ಪತ್ರಿಕಾ ಮಾಧ್ಯಮವು ಜನಾಂಗದಲ್ಲಿ ಬಹಳ ಹಿಂದೆಯೇ ಇರಬೇಕೆನ್ನುತ್ತಾರೆ. ಜನಾಂಗದ ಸರ್ವ ಏಳಿಗೆಯೇ ನನ್ನ ಅಭಿಲಾಷೆಯಾಗಿದೆ ಎಂದು ಉತ್ತರಿಸಿದಾಗ ನಮ್ಮವರ ಬಗ್ಗೆ ಅಭಿಮಾನ ಸ್ಫೂರ್ತಿಯಾಗಿದ್ದರು.

ಅನಿತಾರಾಣಿ ಮತ್ತು ನಿರಂಜನ್ ದಂಪತಿಗಳ ಜೊತೆ ಮಾತನಾಡಿದಾಗ ನಿಜಕ್ಕೂ ಕೊಡಗಿನ ಬಗ್ಗೆ ಅದರಲ್ಲೂ ನಮ್ಮವರ ಬಗ್ಗೆ ಹೆಮ್ಮೆಯಿಂದ ಬೀಗುತ್ತಿದ್ದರು. ಕೊನೆಯದಾಗಿ ಕೇಳಿದ ಪ್ರಶ್ನೆಗೆ ನಮ್ಮ ಜನಾಂಗದಲ್ಲಿರುವ ಯುವ ಪತ್ರಿಭೆಗಳನ್ನು ಪತ್ತೆಹಚ್ಚಿ ಚಿತ್ರರಂಗದಲ್ಲಿ ಉತ್ಸುಕತೆ ಇರುವ ಪ್ರತಿಭೆಯನ್ನು ಒಂದುಗೂಡಿಸಿ ಚಿತ್ರ ತೆಗೆಯುವ ಅಭಿಲಾಷೆ ಹೊಂದಿರುವ ಇವರ ಆಸೆಯೂ ಆದಷ್ಟು ಬೇಗ ಕೂಡಿಬರಲೆಂದು ಸಂಗಾತಿ ಆಶಿಸಿದಲ್ಲದೆ ಇವರಿಗೆ ಚಿತ್ರರಂಗದಲ್ಲಿ ಉಜ್ವಲ ಭವಿಷ್ಯವನ್ನು ಕೋರುತ್ತಾ ಕುಲಗುರು ಶ್ರೀ ವೆಂಕಟರಮಣನ ಅಭಯ ಹಸ್ತವು ಸದಾ ಇರಲೆಂದು ಬಯಸಿ ಹೊರಬಂದಾಗ ಏನೋ ಅಪೂರ್ವ ನಿಧಿಯನ್ನು ಕಂಡಂತೆ ಭಾಸವಾಯಿತ್ತಲ್ಲದೆ ಜನಾಂಗದ ಕೀರ್ತಿಯನ್ನು ಚಿತ್ರರಂಗದಲ್ಲಿ ಮೆರೆದ ಬಗ್ಗೆ ಮೆಲುಕು ಹಾಕುವುದನ್ನು ಸಂಗಾತಿ ಮರೆಯಲಿಲ್ಲ. ●

ಸಂದರ್ಶನ ವರದಿ : ಅಮ್ಮಾಜಿರ ಪೊನ್ನಪ್ಪ

ಲೇಖನ : ಪಟ್ಟಡ ಪ್ರಭಾಕರ

## ಮೂರ್ಖರೋ ನಾವು ಮೂರ್ಖರು !

ನಾವು ರಾಜಕೀಯದ ಬಗ್ಗೆ ಸ್ವಲ್ಪ ತಲೆಕೆಡಿಸಿಕೊಂಡಾಗ, ಹಿಂದಿನ ರಾಜರ ಬಗ್ಗೆ ಹಿಂದಿರುಗಿ ನೋಡಬೇಕಾಗುತ್ತದೆ. ಆಗಿನ ರಾಜಕೀಯ, ಈಗಿನ ರಾಜಕೀಯ ಹಾಗೂ ರಾಜಕಾರಣಿ ಈ ಎರಡು ವಿಷಯಗಳಲ್ಲಿ ವ್ಯತ್ಯಾಸ ಕಂಡು ಬರುತ್ತದೆ. ಇತಿಹಾಸ ದಲ್ಲಿ ಪುರಾಣಗಳಲ್ಲಿ ಬರುವ ರಾಜರು ತಮ್ಮ ಪ್ರಜೆಗಳಿಗಾಗಿ, ಶ್ರಮಿಸುತ್ತಿದ್ದರು, ಚಿಂತಿಸುತ್ತಿದ್ದರು ಹಾಗೂ ಪ್ರಜೆಗಳ ಕಷ್ಟ ಕಾರ್ಪಣ್ಯಗಳಿಗೆ ಕಾರಣ ಹುಡುಕಿ ಪರಿಹಾರ ಕಂಡುಹಿಡಿಯು ತ್ತಿದ್ದರು. ಬೇರೆ ರಾಜರು ತಮ್ಮ ರಾಜ್ಯದ ಮೇಲೆ ಆಕ್ರಮಿಸಿ ದಾಗ ತಾವೇ ಖಡ್ಗ ಹಿಡಿದು ಹೋರಾಡಿ ತನ್ನ ರಾಜ್ಯ ಹಾಗೂ ತನ್ನ ಪ್ರಜೆಗಳನ್ನು ರಕ್ಷಿಸುತ್ತಿದ್ದರು. ಆದರೇ ಈಗಿನ ರಾಜ! ಅಂದರೆ ಗ್ರಾಮ ಪಂಚಾಯಿತಿ ಸದಸ್ಯನಿಂದ ಹಿಡಿದು ಪ್ರಧಾನಿ ವರೆಗಿನ ರಾಜರು ಖಡ್ಗ ಹಿಡಿಯುವುದಿರಲಿ, ತಾನು ಚುನಾವಣೆ ಯಲ್ಲಿ ಕೊಟ್ಟ ಆಶ್ವಾಸನೆಯನ್ನಾದರು ಈಡೇರಿಸುತ್ತಾನೆಯೇ ? ಈ ಪ್ರಶ್ನೆಗೆ ಉತ್ತರ ಭಾರತ ದೇಶದ ಪ್ರತಿಯೊಬ್ಬ ಪ್ರಜೆಗೂ ತಿಳಿದಿರುವಂತಹ ವಿಷಯ. ಚುನಾವಣೆ ಬಂದಾಗ ಮತದಾರನ ಕಾಲಿಡಿದು ಸಾವಿರಾರು ಆಶ್ವಾಸನೆ ಕೊಟ್ಟು ಗೆದ್ದು ಬಂದ ನಂತರ ಪ್ರಜೆಗಳಿಗೆ ಒಣಮರವಾಗಿ ಬಿಡುತ್ತಾನೆ. ತನ್ನ ಅಧಿ ಕಾರ ಅವಧಿಯಲ್ಲಿ ನಡೆದ ಕೆಲವು ಕಾಮಗಾರಿ ಕೆಲಸಗಳನ್ನೆಲ್ಲ 'ನಾನು ಮಾಡಿಸಿದ್ದು' ಎನ್ನುತ್ತಾನೆ. 'ನಾನು ಮಾಡಿಸಿದ್ದು' ಎನ್ನುವುದರ ಅರ್ಥವೇನು ? ನಾವು ಪ್ರತಿಯೊಂದು ವಸ್ತು ಗಳನ್ನು ಖರೀದಿಸಿದಾಗ ಆ ವಸ್ತುವಿನಿಂದ ಸರಕಾರ ತೆರಿಗೆ ಸಂಗ್ರಹಿಸುವುದು ನಮಗೆ ತಿಳಿಯಬಹುದು, ತಿಳಿಯದೇ ಇರ ಬಹುದು. ಹೀಗೆ ಸಂಗ್ರಹವಾದ ತೆರಿಗೆಯನ್ನು ದೇಶದ ಅಭಿ ವೃದ್ಧಿಗೆ ಉಪಯೋಗಿಸಲಾಗುವುದು. ಉಪಯೋಗಿಸುವು ದಾದರು ಎಷ್ಟು? ರಾಜ ತಿಂದು ಉಳಿದದ್ದು ಮಾತ್ರ! ನಮ್ಮಿಂದ ನಮಗಾಗಿ ನಮಗೋಸ್ಕರವೇ ಇರಬೇಕಾದ ವ್ಯಕ್ತಿ ನಮ್ಮಿಂದ ಸಂಗ್ರಹಿಸಿದ ಹಣನ ಸಮಾಜದ ಅಭಿವೃದ್ಧಿಗೆ ಉಪಯೋಗಿಸಿದರೆ ಅದು ನಾನು ಮಾಡಿಸಿದೆಂದರೇ ಸತ್ಯವೆ ? ಆಗ ನಾವು ಮೂರ್ಖ ರಲ್ಲವೇ ?

ರಾಷ್ಟ್ರೀಯ ಪಕ್ಷವೊಂದು ಜಾತಿಯ ನೀತಿಯನ್ನು ಹೊಂದಿದೆ, ಎಂದು ವಿರೋಧಿಸುವ ಕೆಲವು ಪಕ್ಷದ ನಾಯಕರು ಸ್ಥಳೀಯ ಚುನಾವಣೆಗಳಲ್ಲಿ 'ನಮ್ಮ ಜಾತಿಯವ್ಲ ಓಟು ಕೊಡಿ' ಎನ್ನುತ್ತಾರಲ್ಲ, ಆಗ ಅವರ ನೀತಿ ಯಾವುದು. ಅವರು ರಾಷ್ಟ್ರೀಯ ಮಟ್ಟದಲ್ಲಿ ಜಾತ್ಯಾತೀತ ಪಕ್ಷ. ಸ್ಥಳೀಯ ಚುನಾ ವಣೆಗಳಲ್ಲಿ ಜಾತಿಯ ಪಕ್ಷ. ಅದು ಆವರ ಜಾತಿಯವರು ಎಷ್ಟಿದ್ದಾರೆಂದು ಲೆಕ್ಕದ ಮೇಲೆ. ಒಟ್ಟಿನಲ್ಲಿ ಜಾತಿಯ ಪಕ್ಷನೂ, ಜಾತ್ಯಾತೀಯ ಪಕ್ಷನೂ ಒಂದೇ. ಅಂದರೆ ಇವರ ಉದ್ದೇಶ ಸ್ವಾರ್ಥಕ್ಕಾಗಿ ! ಅಂದರೆ ಮುರ್ಖರ್‍ಯಾರು ? ನಾವೇ !

ಪ್ರಜೆಗಳಿಂದ, ಪ್ರಜೆಗಳಿಗಾಗಿ, ಪ್ರಜೆಗಳಿಗೋಸ್ಕರ ಪ್ರಜಾಪ್ರಭುತ್ವ. ಆದರೆ ಈಗಿನ ಪ್ರಜಾಪ್ರಭುತ್ವ ! ಪ್ರಜಾ ಪ್ರಭುತ್ವ ಅಲ್ಲ ಪ್ರಭುತ್ವ. ನಮ್ಮಿಂದ ಅವರಿಗಾಗಿ ನಮ್ಮನ್ನೇ ಮೂರ್ಖರನ್ನಾಗಿಸುವ ರಾಜಕಾರಣಿಗಳ ತತ್ವ. ●

ಕುಂಬಗೌಡನ ಅರವಿಂದ್ ಮಾಚಯ್ಯ, ಮುಕ್ಕಂದೂರು.

## ಕುಡುಕರ ಪ್ರಲಾಪ

ಚೋಮ ಯದ್ವಾ ತದ್ವಾ ಕುಡಿದು ಒಂದು ಮೂಲೆ ಯಲ್ಲಿ ಅಳುತ್ತಾ ಕುಳಿತ್ತಿದ್ದ. ಇನ್ನೊಬ್ಬ ಕುಡುಕ ಅದೇ ಕಡ ಬಂದವನು, ಚೋಮನನ್ನು ಕಂಡು ಅದೇಕಯ್ಯ ಅಳ್ತಾ ಇದ್ದೀಯಾ ? ಎಂದು ಕೇಳಿದ. ಅದಕ್ಕೆ ಅಳುತ್ತಿದ್ದ ಚೋಮ ಇವತ್ತು ಡಾಕ್ಟರ್ ಹತ್ತಿರ ಹೋಗಿದ್ದೆ. ನೀನು ಕುಡಿಯುವು ದನ್ನು ಕಡಿಮೆ ಮಾಡಬೇಕು ಇಲ್ಲದಿದ್ದರೆ ನೀನು ಸತ್ತು ಹೋಗ್ತೀಯ ಎಂದು ಹೇಳಿದರು. ಆಗ ನಾನು ತುಂಬಾ ಯೋಚಿಸತೊಡಗಿದೆ. ಕೂಡಲೇ ಡಾಕ್ಟರು ಕೊನೆಯ ಪಕ್ಷ ತಿಂಗಳಿಗೊಂದ್ಸಲ ಕುಡಿಯಯ್ಯ ಅಂದರು.

'ಅದಕ್ಕೆ ಇನ್ನೊಬ್ಬ ಕುಡುಕ : ಒಳ್ಳೇದೆ ಆಯ್ತಲ್ಲ, ತಿಂಗಳಿಗೆ ಒಂದ್ಸಲ ಕುಡಿ, ಅದಕ್ಕೇಕೆ ಅಳ್ತಿದ್ದೀಯ ಎಂದ.

ಒಂದು ವಾರಕ್ಕೆ ಎಷ್ಟು ತಿಂಗಳುಗಳು ಬರುತ್ತವೆಂಬುದು ನನಗೆ ತಿಳಿಯದು ಅದಕ್ಕೆ ಅಳ್ತಿದ್ದೇನೆ. ನಿನಗೇನಾದರೂ ಗೊತ್ತಾ ? ಎಂದು ಕೇಳಿದ.

ಅದಕ್ಕವನು ಹೇಳಿದ : ವಾರದಲ್ಲಿ ಎಷ್ಟು ಸಲ ತಿಂಗಳು ಗಳು ಬರುತ್ತವೆಂಬುದು ಗೊತ್ತಿಲ್ಲ, ಆದ್ರೆ ದಿವಸಕ್ಕೆ ಎರಡು ತಿಂಗಳು ಬರುವುದು ಮಾತ್ರ ಗೊತ್ತು ಎಂದ.

ಹಾಗಾದರೆ ಇನ್ನೂ ತೊಂದರೆಯಾಯಿತಲ್ಲ ! ದಿನಕ್ಕೆ ಒಂದ್ಸಲ ಕುಡಿಯೋಕೇ ದುಡ್ಡಿಲ್ಲ, ಇನ್ನೆರಡು ಸಲಕ್ಕೆಲ್ಲಿ ದುಡ್ಡು ತರಲಿ, ಎಂದು ಇನ್ನೂ ಜೋರಾಗಿ ಅಳೋದಕ್ಕೆ ಪ್ರಾರಂಭಿಸಿದ ಚೋಮ !

—ಚಿಲ್ಲನ ಮನು, ಕುಯ್ಯಂಗೇರಿ.

# ಯುವಕರು ತಮ್ಮ ಭವಿಷ್ಯವನ್ನು ತಾವೇ ರೂಪಿಸಿಕೊಳ್ಳುವ ಬಗೆ ಹೇಗೆ ?

ನಾಲಿಗೆ ಇರುವಾಗಲೇ ನಾರಾಯಣ ಎನ್ನಬೇಕಲ್ಲದೆ, ನಾಲಿಗೆ ಬಿದ್ದುಹೋದ ಮೇಲೆ ನಾರಾಯಣ ಎನ್ನಲಾಗದಲ್ಲಾ ಎಂದು ಪರಿತಪಿಸಬಾರದು. student life is golden life" ಎನ್ನಲಾಗುತ್ತದೆ. ವಿದ್ಯಾರ್ಥಿ ತನ್ನ ವಿದ್ಯಾರ್ಥಿ ದೆಸೆಯ ಉತ್ತರಾರ್ಧದಲ್ಲಿ [ಶಾಲೆ ಕಲಿತು ಕಾಲೇಜು] ಯೌವ್ವನಾವಸ್ಥೆಯನ್ನು ತಲುಪಿರುತ್ತಾನೆ. ವಿದ್ಯಾರ್ಥಿ ಜೀವನದ ಆ ಚಿನ್ನದ ಮೆರಗು ಇರುವಾಗಲೇ ತನ್ನ ಭವಿಷ್ಯದ ಬಗ್ಗೆ ಚಿಂತಿಸುವುದು ಅಗತ್ಯ ಮತ್ತು ಅದೇ ಸೂಕ್ತ ಸಮಯ.

ನಾನು ಈ ಲೇಖನವನ್ನು ಬರೆಯುವಷ್ಟು ಪ್ರಬುದ್ಧನಿದ್ದೇನೆ ಎನಿಸುವುದಿಲ್ಲ. ಆದರೆ ಯುವಕರ ಬಗೆಗಿನ ಕಾಳಜಿಯೇ ಈ ಲೇಖನದ ಸ್ಫೂರ್ತಿ. ಇಲ್ಲಿ ನಾನು ಏನು ವಿಚಾರವನ್ನು ಪ್ರಚುರ ಪಡಿಸುತ್ತಿದ್ದೇನೆ. ಅದು ಕೇವಲ ನನ್ನ ಸ್ಥೀಮಿತ ಅನುಭವದ ಪರಿಧಿಯೊಳಗಿರುವುದರಿಂದ ಯುವಕರು ಇದೇ ವಿಚಾರವನ್ನು ಅನುಸರಿಸಬೇಕೆಂದಲ್ಲ. ಯುವಕರು ಕನಿಷ್ಠ ತಮ್ಮ ಭವಿಷ್ಯದ ವಿಚಾರದಲ್ಲಿ ತಮ್ಮದೇ ಆದ ರೀತಿಯಲ್ಲಿ ಚಿಂತಿಸು

ಕುಂಭಗೌಡನ ರಂಜಿತ್, ಮುಕ್ಕಂದೂರು

ವಂತಾಗಬೇಕೆನ್ನುವುದೇ ಈ ನನ್ನ ಲೇಖನದ ಉದ್ದೇಶ. ಯುವಕರಿಗೆ ಭವಿಷ್ಯದ ಬಗ್ಗೆ ಚಿಂತೆ ಇಲ್ಲ ಎನ್ನಲಾರೆ. ಮಕ್ಕಳಿಗೆ ಬುದ್ಧಿ ಹೇಳುವ ಹಿರಿಯರಿರುವಂತೆ ಪೋಷಕರಿಗೆ ತಿಳಿಹೇಳಿ ಅವರನ್ನು ಸರಿದಾರಿಗೆ ತಂದ ಮಕ್ಕಳೂ ಬಹಳಷ್ಟು ಸಿಗುತ್ತಾರೆ. ಆದರೆ ಕೆಲವರು ನಾಳಿನ ಚಿಂತೆಯಲ್ಲಿ ಇಂದಿನ ಸುಖವನ್ನು ಏಕೆ ಕಳೆದುಕೊಳ್ಳಬೇಕೆನ್ನುವರು. ಇಂದು ಸುಖಿಸುವ, ನಾಳೆ ಬರುವುದನ್ನು ನಾಳೆ ನೋಡಿಕೊಂಡರಾಯಿತು ಎನ್ನುವವರಿಗೆ ಒಂದು ಮಾತು. ಇಂದು ನೀವು ಸುಖವಾಗಿದ್ದರೆ, ಅದು ನೀವು ನಿನ್ನೆ ಚಿಂತಿಸಿದುದರ ಫಲ. ಹಾಗೆ ನಾಳೆಯೂ ಸುಖವಾಗಿರಬೇಕೆನ್ನುವುದಾದರೆ ನಾಳಿನ ಬಗ್ಗೆ ಇಂದು ಚಿಂತಿಸಬೇಕಾಗುತ್ತದೆ. ಚಿಂತಿಸುವುದು ಎಂದರೆ ಕೊರಗುವುದು ಎಂದಲ್ಲ. ಚಿಂತೆ ವೈಜ್ಞಾನಿಕವಾಗಿಯೂ, ಕ್ರಿಯಾತ್ಮಕವಾಗಿಯೂ, ವಾಸ್ತವಿಕತೆಗೆ ಬಹಳ ಹತ್ತಿರವಾಗೂ ಹಿಂದಿನ ಅನುಭವಗಳ ಮೂಸೆಯಲ್ಲಿ ಹದವಾಗಿ ಪರಿಪಕ್ವವಾಗಿ ಚೆಂದು ಆರೋಗ್ಯಕರವಾಗಿರಬೇಕು. ಹುಳಿದೋಸೆ ಮಾಡಬೇಕಾದರೆ ಹಿಂದಿನ ದಿನವೇ ಅಕ್ಕಿ ರುಬ್ಬಿ ಇಟ್ಟುಕೊಂಡಿರಬೇಕು. ಹಾಗೇ ಭವಿಷ್ಯದ ಚಿಂತನೆ ಎಂದರೆ ಅದು ಶೀಘ್ರದಲ್ಲಿ ಇತ್ಯರ್ಥವಾಗಿಬಿಡಬೇಕು. ನಾಳಿನ ಚಿಂತೆ ಎಂದರೆ ನಾಳೆ ಬೆಳಕು ಹರಿಯುವವರೆಗೆ ಚಿಂತಿಸುತ್ತಲೇ ಇದ್ದು ಬಿಡುವುದಿಲ್ಲ. ಮಕ್ಕಳಿಗೆ ತಂದೆ ತಾಯಂದಿರು ಉತ್ತಮ ಅವಕಾಶಗಳನ್ನು ಕಲ್ಪಿಸಿ ಸರಿದಾರಿಯಲ್ಲಿ ಒಂದು ಹಂತದವರೆಗೆ ಕೊಂಡೊಯ್ದು ಬಿಡುವುದು ಅಗತ್ಯ. ಆದರೂ ಒಬ್ಬ ವ್ಯಕ್ತಿಯ ಒಲವು-ನಿಲುವು ದೌರ್ಬಲ್ಯ ವಾತಾವರಣ, ಸಂಪನ್ಮೂಲ ಅವಕಾಶ ಇವೆಲ್ಲವುದರ ಪೂರ್ಣ ಪ್ರಮಾಣದ ಪರಿಚಯ ಆತನ ಹೊರತು ಮತ್ತೊಬ್ಬನಿಗೆ ಇರುವುದಿಲ್ಲ. ತನ್ನ ತಲೆಗೆ ತನ್ನದೆ ಕೈ ಎಂಬಂತೆ ಯುವಕರು ಪರವಾಲಂಬಿ ಆಗಿರದೆ ಸ್ವತಂತ್ರ ಚಿಂತನೆ ಬಹಳ ಮುಖ್ಯ. ಮಕ್ಕಳನ್ನು ಅತೀ ಮುದ್ದು ಮಾಡುವುದು ಅವರಿಗೆ ಅವರ ವಯಸ್ಸಿಗೆ ತಕ್ಕ ಜವಾಬ್ದಾರಿ ಮತ್ತು ಅಧಿಕಾರ ಕೊಡದಿರುವುದೇ ಅನೇಕ ಯುವಕರು ಜೀವನದ ಹೋರಾಟದಲ್ಲಿ ಸೋಲಲು ಕಾರಣ. ಕೇವಲ ಜವಾಬ್ದಾರಿ ಕೊಟ್ಟು ಅಧಿಕಾರ ಕೊಡದಿದ್ದರೆ ಆತನಿಗೆ ಜವಾಬ್ದಾರಿಯನ್ನು ನಿರ್ವಹಿಸಲು ಸಾಧ್ಯವಾಗುವುದಿಲ್ಲ. ಹಾಗೆಯೇ ಅಧಿಕಾರ ಕೊಟ್ಟು ಜವಾಬ್ದಾರಿ ವಹಿಸದಿದ್ದರೆ ಅಲ್ಲೂ ಅಧಿಕಾರದ ದುರುಪಯೋಗವಾಗಿ ಅರಾಜಕತೆ ಉಂಟಾಗುತ್ತದೆ. ಒಂದೇ ಮಾತಿನಲ್ಲಿ ಹೇಳುವುದಾದರೆ ಪೋಷಕರು ತಮ್ಮ ಮಕ್ಕಳಿಗೆ ಜವಾಬ್ದಾರಿ ವಹಿಸುವುದು ಮತ್ತು ಅಧಿಕಾರ ಕೊಡುವುದನ್ನು ಸರಿಯಾಗಿ ನಿರ್ವಹಿಸಿದರೆ ಅಂತಹವರ ಮಕ್ಕಳ ಭವಿಷ್ಯ ಉಜ್ವಲವಾಗುತ್ತದೆ.

ವಿದ್ಯಾರ್ಹತೆಗೆ ಸಂಬಂಧ ಪಟ್ಟಂತೆ ಕನಿಷ್ಠ ಪ್ರೌಢ ಹಂತದ ಶಿಕ್ಷಣ ಮುಗಿಸಿರಲೇಬೇಕು. ಮುಂದೆ ಯಾವುದೇ ಉನ್ನತ ವ್ಯಾಸಂಗಕ್ಕೆ ಹೋದರೂ ಉದ್ಯೋಗ ಪಡೆದುಕೊಳ್ಳುವಲ್ಲಿ ಜನ್ಮ ದೃಢೀಕರಣ ಪತ್ರವಾಗಿ ನಾವು ಎಸ್.ಎಸ್.ಎಲ್.ಸಿ. ಯಲ್ಲಿ ತನ್ನ ಸಾಮರ್ಥ್ಯದ ಗರಿಷ್ಠ ಸಾಧನೆಯ ದಾಖಲೆ ಮಾಡಬೇಕು. ಪ್ರೌಢ ಶಿಕ್ಷಣದ ನಂತರ ನಾವು ಓದುವ, ಓದು ಪಡೆಯುವ ತರಬೇತಿ ಇವು ಯಾವ ರೀತಿಯಲ್ಲಿ ತಮ್ಮ ಸಹಾಯಕ್ಕೆ ಬರುತ್ತವೆ ಎಂಬ ವಿಚಾರ ಮಾಡುತ್ತಿರಬೇಕು. ಎಲ್ಲೂ ವ್ಯರ್ಥ ಕಾಲಾಹರಣ ಮಾಡದೆ ಸದಾ ಕ್ರಿಯಾಶೀಲರಾಗಿರಬೇಕು. ತಮಗೆ ಬರುವ ಅವಕಾಶಗಳನ್ನು ಸೂಕ್ಷ್ಮಗ್ರಾಹಿಯಾಗಿ ಉಪಯೋಗಿಸಿಕೊಳ್ಳಬೇಕು. ಮೊದಲು ಸಿಕ್ಕ ಅವಕಾಶವನ್ನು ಬಳಸಿಕೊಂಡು ಉನ್ನತ ಅವಕಾಶ ಬಂದಾಗ ಮೇಲೆ ಮೇಲೆ ಏರುತ್ತಾ ಹೋಗಬೇಕೆ ವಿನಹಃ ಒಮ್ಮೆಲೇ ಉತ್ತಮ ಅವಕಾಶ ಸಿಕ್ಕಿಬಿಡಬೇಕೆಂದು ಬಂದ ಅವಕಾಶಗಳನ್ನೆಲ್ಲಾ ತಿರಸ್ಕರಿಸಿದರೆ ಮತ್ತೆ ಮತ್ತೆ ಅವಕಾಶಗಳು ತಮ್ಮನ್ನು ಹುಡುಕಿಕೊಂಡು ಬರಲಾರವು. ಪ್ರತಿಯೊಬ್ಬನಿಗೆ ಸರಿಯಾದ ಸಮಯದಲ್ಲಿ ಒಂದೆರಡು ಅವಕಾಶಗಳು ಬಂದೇ ಬರುತ್ತವೆ. ಆಗ ಅದನ್ನು ಉಪಯೋಗಿಸಿಕೊಳ್ಳದಿದ್ದರೆ ಮತ್ತೆ ಬಹಳ ಕಾಲದವರೆಗೆ ಅವಕಾಶಗಳೇ ಮಾಯ

ವಾಗುತ್ತವೆ. ಬಹಳ ತಡವಾಗಿ ಮತ್ತು ಅವಕಾಶ ಬರುವ ಹೊತ್ತಿಗೆ ನಮ್ಮ ವಯಸ್ಸು ನಿಂತಿರುವುದಿಲ್ಲ. ಮತ್ತು ಬರುವ ಅವಕಾಶದ ವಿರುದ್ಧ ದಿಕ್ಕಿನಲ್ಲಿ ನಾವು ಬಹಳ ದೂರ ಸಾಗಿ ಹೋಗಿರುತ್ತೇವೆ. ಮತ್ತೆ ನಾವು ಹಿಂತಿರುಗಲಾಗದ ಸ್ಥಿತಿಗೆ ತಲುಪಿರುತ್ತೇವೆ. ಸೂಕ್ತ ಸಮಯದಲ್ಲಿ ಸೂಕ್ತ ನಿರ್ಧಾರ ಬಹಳ ಮುಖ್ಯ. ಆನೆ ಮುರಿದು ತಿನ್ನುವಷ್ಟು ಎತ್ತರದಲ್ಲಿರುವ ಸೊಪ್ಪು ತನಗೂ ಮುರಿದು ತಿನ್ನಬೇಕೆಂದರೆ ಆಡು ಆಡಿಗೆ ಸಾಧ್ಯವಾಗದು. ಹಾಗೆ ಆಡು ನುಸುಳುವ ಕಿರಿದಾದ ಸಂದಿಯಲ್ಲಿ ತನಗೂ ನುಸುಳಿಕೊಂಡು ಹೋಗಬೇಕೆಂದರೆ ಅದು ಆನೆಗೆ ಸಾಧ್ಯವಾಗದು. ಆದರಂತೆ ತಮ್ಮ ಯೋಗ್ಯತೆಗೆ ತಕ್ಕ ಅವಕಾಶ ಸಿಕ್ಕಾಗ ಅದರಲ್ಲಿ ಸಂತೃಪ್ತ ಜೀವನ ನಡೆಸುವುದನ್ನು ಕಲಿಯಬೇಕು. ಬದುಕು ಕೆಲವರೆಂಡುಕೊಂಡಂತೆ ಕಠಿಣವೇನಲ್ಲ.

ಸಾಮಾನ್ಯವಾಗಿ ಮಕ್ಕಳು ತಮ್ಮ ಪೋಷಕರು ಅವಲಂಬಿಸಿರುವ ವೃತ್ತಿಯ ಬಗೆಗೆ ಒಲವು ತೋರಿಸುತ್ತಾರೆ. ಇದಕ್ಕೆ ಕಾರಣ ಪೋಷಕರಲ್ಲಿನ ಕುಶಲತೆ ವಂಶ ಪರಂಪರಾಗತವಾಗಿ ಮಕ್ಕಳಿಗೆ ಬಂದಿರುವುದು. ಆದರೆ ಮಕ್ಕಳ ಈ ಒಲವನ್ನು ಪೋಷಕರು ಪೂರ್ವಾಗ್ರಹ ಎಂದು ಭಾವಿಸಿ ನಾನು ಈ ವೃತ್ತಿಯನ್ನು ಮಾಡಿದ್ದು ಸಾಕು ನಿನಗದು ಬೇಡ ಎಂದು ಮಕ್ಕಳನ್ನು ವಿಮುಖರನ್ನಾಗಿಸುತ್ತಾರೆ, ಇದು ಸರಿಯಾದುದಲ್ಲ. ಬಡಗಿಯೊಬ್ಬನ ಮಗ ಅದೇ ವೃತ್ತಿಯ ಬಗ್ಗೆ ಒಲವು ತೋರಿದರೆ ಅವನನ್ನು ಅದೇ ವೃತ್ತಿಯಲ್ಲಿ ಮುಂದುವರಿಯಲು ಬಿಡುವುದು ಒಳ್ಳೆಯದು, ಕಾರಣ ಆತನಿಗೆ ವೃತ್ತಿ ಕೌಶಲ್ಯ ತಂದೆಯಿಂದ ಬಂದಿರುತ್ತದೆ ಮತ್ತು ತಂದೆಯಾದವ ಅದೇ ಕ್ಷೇತ್ರದಲ್ಲಿ ಅನುಭವ ಪಡೆದಿರುವುದರಿಂದ ಮಕ್ಕಳಿಗೆ ಮಾರ್ಗದರ್ಶನ ಮಾಡಲು ಸಹಾಯವಾಗುತ್ತದೆ. ಇಲ್ಲಿ ಕೆಲಸ ಸುಲಭವಾಗುತ್ತದೆ ಕಾಲಾಹರಣವಾಗುವುದಿಲ್ಲ. ಆದರೆ ಬಡಗಿಯೊಬ್ಬ ತನ್ನ ಮಗ ದರ್ಜಿ ಆಗಬೇಕೆಂದು ಬಯಸಿದರೆ ಅವನನ್ನು ಬೇರೊಬ್ಬ ದರ್ಜಿಯಲ್ಲಿ ಬಿಡಬೇಕು. ಅಲ್ಲಿ ಆತ ಕನಿಷ್ಠ ಪ್ರತಿಫಲ [ಕೂಲಿ] ಪಡೆಯುತ್ತಾ ಅರೆಹೊಟ್ಟೆಯಲ್ಲಿ ಕೇವಲ ಅಂಗಿಗೆ ಗುಬ್ಬಿ ಹೊಲೆಯುತ್ತಲೇ ಬಹಳ ಕಾಲ ಕಳೆಯಬೇಕು. ದರ್ಜಿ ಈ ಹುಡುಗನಿಗೆ ಸುಲಭದಲ್ಲಿ ಕೆಲಸ ಕಲಿಸುವುದಿಲ್ಲ. ತನ್ನ ಎಲ್ಲಾ ಕೌಶಲ್ಯವನ್ನು ತನ್ನ ಶಿಷ್ಯನಿಗೆ ಧಾರೆ ಎರೆಯಲು ಸಿದ್ಧನಿರುವುದಿಲ್ಲ. ತಂದೆಯ ವೃತ್ತಿಯನ್ನೇ ಮಕ್ಕಳು [ಆಸಕ್ತಿ ಇದ್ದಲ್ಲಿ] ಅನುಸರಿಸುವುದರಿಂದ ಆತನಿಗೂ ಹಿತ ಹಾಗೆ ಸಮಾಜದಲ್ಲಿ ಒಂದು ನಿರ್ದಿಷ್ಟ ವೃತ್ತಿಯಲ್ಲಿ ತೊಡಗಿದವರ ಕೊರತೆ ಉಂಟಾಗದೆ ಸಮತೋಲನ ಹೊಂದಿ ಸಮಾಜಕ್ಕೂ ಹಿತ.

ಇತ್ತೀಚೆಗೆ ಒಬ್ಬ ಹಿರಿಯರು ಸಿಕ್ಕಿ ಹೀಗೆ ಲೋಕಾಭಿರಾಮವಾಗಿ ಮಾತನಾಡುತ್ತಿರುವಾಗ ಅವರು "ಗೌಡರುಗಳಿಗೆ ಕತ್ತಿ ಗುದ್ದಲಿಯೇ ಹತ್ತಿದ್ದು" ಎಂದರು. ಈ ಮಾತು ಸರಿ ಎನಿಸುತ್ತದೆ. ಗೌಡ ಜನಾಂಗದವರು ಕೃಷಿಯಲ್ಲಿ ಮುಂದುವರೆಯುವಷ್ಟು ಸುಲಭವಾಗಿ ಇತರೆ ಯಾವುದೇ ಕ್ಷೇತ್ರದಲ್ಲಿ ಮುಂದುವರೆಯಲಾರರು. ಉದ್ಯೋಗ ಇರಲಿ ವ್ಯಾಪಾರವಿರಲಿ ಇತರೆ ಯಾವುದೇ ಕ್ಷೇತ್ರವಿರಲಿ ಎಲ್ಲೊ ಕೆಲವರು ಬಹಳ ಪ್ರಯತ್ನಪಟ್ಟು ಸ್ವಲ್ಪ ಸಾಧನೆ ಮಾಡಿರಬಹುದು. ಕೃಷಿಕರ ಮಕ್ಕಳು ತಮಗೆ ವ್ಯವಸಾಯದ ಕೆಲಸ ಬೇಡವೆಂದರೆ ಮುಂದೆ ಕೃಷಿ ಉತ್ಪನ್ನಗಳ ಗತಿ ಏನು ? ಇಂದು ಕುಶಲ ಕರ್ಮಿಗಳು ವಿರಳ ಆಗಿರುವುದರಿಂದ ಸಕಾಲದಲ್ಲಿ ನಮ್ಮ ಕೆಲಸ ಕಾರ್ಯಗಳು ನಡೆಯುತ್ತಿಲ್ಲ. ಹಲ್ಲು ಕತ್ತಿ ರಿಪೇರಿಗೆ ಕೊಟ್ಟರೆ ಅದು ಒಕ್ಕಲು ಕೆಲಸ ಮುಗಿದ ಮೇಲೆ ಹಲ್ಲು ಹಾಕಿ ಸಿಕ್ಕುವುದು. ಪೀಟೋಪಕರಣ ಮಾಡಲೆಂದು ಬಡಗಿಗೆ ಹೇಳಿ ಮರ ಕೊಯ್ದಿಟ್ಟರೆ ಬಡಗಿ ಬರುವ ಹೊತ್ತಿಗೆ ಮರಕ್ಕೆ ಗೆದ್ದಲು ಹತ್ತಿರುತ್ತದೆ. ಇಲ್ಲಾ ಅಕ್ರಮ ದಾಸ್ತಾನು ಎಂದು ಅರಣ್ಯ ಇಲಾಖೆಯವರು ಮುಟ್ಟುಗೋಲು ಹಾಕಿಕೊಳ್ಳುತ್ತಾರೆ. ಗಾರೆ ಕೆಲಸ ಮಾಡಲು ನಾಳೆ ಬರುತ್ತೇನೆ ಸಿಮೆಂಟು ತರಿಸಿಡಿ ಎಂದು ಹೇಳಿ ಹೋದ ಗಾರೆಯವ ಮತ್ತೆ ಬರುವಾಗ ಸಿಮೆಂಟು ಕಲ್ಲಾಗಿರುತ್ತದೆ. ಮಳೆಗಾಲದಲ್ಲಿ ಮನೆ ರಿಪೇರಿ ಜೋರು ಎನ್ನುತ್ತಾರೆ. ಆದರೆ ಮಳೆ ಹೋಗುವಾಗಲೇ ಮನೆ ಬಿಚ್ಚಿ ಹಾಕಿಕೊಂಡವರು ಆಚಾರಿ ಇಲ್ಲಿ ಮುಟ್ಟಿ ಅಲ್ಲಿ ಮುಟ್ಟಿ ಹೀಗೆ ಹತ್ತಾರು ಕಡೆ ಕೆಲಸ ಮುಗಿಸಿ ಬರುವ ಹೊತ್ತಿಗೆ ಋತುಗಳುರುಳಿ ಮತ್ತೆ ಮಳೆಗಾಲ ಬಂದಿರುತ್ತದೆ. ಇದಕ್ಕೆಲ್ಲಾ ಕಾರಣ ಹುಡುಕ ಹೊರಟರೆ ನಮಗೆ ಸ್ಪಷ್ಟವಾಗುವ ಅಂಶವೆಂದರೆ ನಾವು ಮಾಡುವ ವೃತ್ತಿಯ ಬಗ್ಗೆ ನಮಗೆ ಗೌರವ ಇಲ್ಲದಿರುವುದು. ದೂರದ ಬೆಟ್ಟ ನುಣ್ಣಗೆ ಎಂಬಂತೆ ತಮ್ಮ ಮಕ್ಕಳ ಆಶೋತ್ತರಗಳಿಗೆ ಸ್ಪಂದಿಸದೆ ತಮ್ಮದೇ ಆದ ನಿರ್ಧಾರವನ್ನು ಬಲವಂತವಾಗಿ ಅವರ ಮೇಲೆ ಹೇರುವುದಾಗಿದೆ.

ಜಮೀನಿದ್ದು ದುಡಿಯುವ ಆಸಕ್ತರು ವ್ಯವಸಾಯ ಮಾಡಬಹುದು.

ಕಷ್ಟ ನಷ್ಟಗಳನ್ನು ಧೈರ್ಯದಿಂದ ಎದುರಿಸಬಲ್ಲವರು ಸ್ವ ಉದ್ಯೋಗ ಕೈಗೊಳ್ಳಬಹುದು.

ಯಾವ ತೊಂದರೆ ತೆಗೆದುಕೊಳ್ಳಲು ಇಚ್ಛಿಸದವರು ಮತ್ತೊಬ್ಬರ ಅಡಿಯಾಳಾಗಿ ದುಡಿಯಬೇಕಾದುದು ಅನಿವಾರ್ಯ.

---

**ಸೂಕ್ತಿ**

ಪ್ರೀತಿ ಮತ್ತು ಶಾಂತ ಗುಣವಿರುವವನು ಶಕ್ತ ಮತ್ತು ಮನೋಧೈರ್ಯವಿರುವವನಾಗಿರುತ್ತಾನೆ.

—ಔರೇಲಿಯಸ್.

# ಗೌಡರ ವಿವಾಹ ಪದ್ಧತಿಗಳ ಅವಲೋಕನ

**ರಾಶಿ ಕೂಟ ಈ ರೀತಿ ಇರುತ್ತದೆ :**

1. ಮೇಷ–ಕುಜ 2. ವೃಷಭ–ಶುಕ್ರ
3. ಮಿಥುನ–ಬುಧ 4. ಕಟಕ–ಚಂದ್ರ 5. ಸಿಂಹ–ಶುಕ್ರ
6. ಕನ್ಯಾ–ಬುಧ 7. ತುಲಾ–ಶುಕ್ರ 8. ವೃಶ್ಚಿಕ–ಕುಜ
9. ಧನಸ್ಸು–ಗುರು 10. ಮಕರ–ಶನಿ 11. ಕುಂಭ–ಶನಿ
12. ಮೀನ–ಗುರು.

**12. ಕೂಟಗಳು ಈ ರೀತಿ ಇವೆ :**

1. ತಾರಾಕೂಟ 2. ಗಣಕೂಟ 3. ಮಹೇಂದ್ರಕೂಟ
4. ಸ್ತ್ರೀ ದೀರ್ಘಕೂಟ 5. ಯೋನಿಕೂಟ 6. ರಾಶಿಕೂಟ
7. ಗೃಹ ಮೈತ್ರಿಕೂಟ 8. ವೈಶ್ಯಕೂಟ 9. ರಜ್ಜುಕೂಟ
10. ವೇಧಾಕೂಟ 11. ವರ್ಣಕೂಟ 12 ನಾಡಿಕೂಟ.

ಗೃಹರಾಶಿ ಮತ್ತು ಕೂಟಗಳ ಪ್ರಕಾರ ಮುಹೂರ್ತದ ಚಪ್ಪರದ ನಕ್ಷೆಯನ್ನು ಈ ರೀತಿ ಕೊಟ್ಟಿದೆ.

## ಗೌಡರ ಮದುವೆಯ ಧಾರಾ ಮುಹೂರ್ತದ ಚಪ್ಪರದ ರಚನೆ—ವಧುವಿನ ಮನೆ

ಪಶ್ಚಿಮ

ಲೇಖನ : ಪ್ರೊ॥ ಪೂಜಾರಿ ಮೊಣ್ಣಪ್ಪ

| | | | |
|---|---|---|---|
| 11* ಮೀನ–ಗುರು<br>ಪೂರ್ವಾಭಾದ್ರ 4 ದಿ<br>ಉತ್ತರಾಭಾದ್ರ 1 2 3 4<br>ದು–ಖ–ಝ–ಥ<br>ರೇವತಿ-1-2-3-4<br>ದೆ–ದೊ–ಚ-ಚಿ 1* | ಮೇಷ ಕುಜ<br>ಅಶ್ವಿನಿ-1-2-3-4<br>ಚು–ಚೈ–ಲ<br>ಭರಣಿ-1-2-3-4<br>ಲಿ-ಲು-ಲೆ-ಲೊ<br>ಕೃತಿಕಾ 1 ಅ *2 | ವೃಷಭ ಶುಕ್ರ<br>ಕೃತ್ತಿಕಾ 2-3-4<br>ಇ-ಉ-ಎ<br>ರೋಹಿಣಿ–1-2-3-4<br>ಒ-ವ-ವಿ-ವು<br>ಮೃಗಶಿರಾ 1 2 ವೆವೊ*3 | *10<br>ಮಿಥುನ ಬುಧ<br>ಮೃಗಶಿರಾ 3 4<br>ಕ ಕಿ<br>ಆರ್ದ್ರಾ 1 2 3 4<br>ಕು ಘ ಙ ಛ<br>ಪುನರ್ವಸು 1 2 3 ಕೆ ಕೊ ಹ |
| ಕುಂಭ–ಶನಿ<br>ಧನಿಷ್ಠಾ-3-4 ಗು–ಗೆ<br>ಶತಭಿಷ-1-2-3-4<br>ಗೊ–ಸ–ಸಿ–ಸು<br>ಪೂರ್ವಭಾದ್ರ–1-2-3<br>ಸೆ–ಸೊ–ದ 8* | ಹಾಲು ಬರುವ ಮರದ ಕಂಬ<br>ವಧು–ವರರು<br>ಧಾರಾ ಮಂಟಪ | | ಕಟಕ ಚಂದ್ರ<br>ಪುನರ್ವಸು 4 ಹಿ<br>ಪುಷ್ಯ 1-2-3-4<br>ಹು ಹೆ ಹೊ ಡ<br>ಆಶ್ಲೇಷ 1 2 3 4<br>ಡಿ ಡು ಡೆ ಡೊ<br>*4 |
| ಮಕರ–ಶನಿ<br>ಉತ್ತರಾಷಾಢ –2-3-4<br>ಬೊ–ಜ–ಜಿ<br>ಶ್ರವಣ-1-2-3-4<br>ಖಿ-ಖು-ಖೆ-ಖೊ<br>ಧನಿಷ್ಠಾ–1-2-ಗ-ಗಿ<br>7* | | | ಸಿಂಹ ರವಿ<br>ಮಖಾ 1 2 3 4<br>ಮ ಮಿ ಮು ಮೆ<br>ಪುಬ್ಬಾ 1 2 3 4<br>ಮೊ ಟ ಟಿ ಟು<br>*5 ಉತ್ತರಾ 1 ಟೆ |
| ಧನಸ್ಸು–ಗುರು<br>ಮೂಲ 1–2-3–4<br>ಯೆ–ಯೊ–ಬ-ಬಿ<br>ಪೂರ್ವಾಷಢ 1-2-3-4<br>ಬು–ಧ-ಭ-ಢ<br>ಉತ್ತರಾಷಾಡ 1 ಬೆ<br>12* | ವೃಶ್ಚಿಕ ಕುಜ<br>ವಿಶಾಖ 4 ತೊ<br>ಅನುರಾಧ 1 2 3 4<br>ನ ನಿ ನು ನೆ<br>ಜ್ಯೇಷ್ಠಾ 1 2 3 4<br>ನೊ ಯ ಯಿ ಯು | ತುಲಾ ಶುಕ್ರ<br>ಚಿತ್ರಾ 3 4 ರ ರಿ<br>ಸ್ವಾತಿ 1 2 3 4<br>ರು ರೆ ರೊ ತ<br>ವಿಶಾಖ 1 2 3 ತಿ ತು ತೆ<br>6* | ಕನ್ಯಾ ಬುಧ<br>ಉತ್ತರಾ 2 3 4<br>ಟೊ ಪ ಪಿ<br>ಹಸ್ತ 1 2 3 4<br>ಚಿತ್ರಾ 1 2 ಪೆ ಪೊ<br>*9 |

ದಕ್ಷಿಣ (left) · ಉತ್ತರ (right)

* ಕಂಬಗಳು

ಪೂರ್ವ

—ವಧೂವರರಿಗೆ ಆಶೀರ್ವಾದ ಸೂಚನೆ

# ಆರೋಗ್ಯ ಚಿಂತನ

## ಎದೆಹಾಲಿನ ಪ್ರಾಮುಖ್ಯತೆ :

ಮಗುವಿಗೆ ತಾಯಿಯ ಎದೆಹಾಲು ಎಲ್ಲಾ ರೀತಿಯಿಂದಲೂ ಸರ್ವಶ್ರೇಷ್ಠವಾದದ್ದು. ಎದೆಹಾಲಿನ ಪ್ರಾಮುಖ್ಯತೆಯನ್ನು ವಿವರಿಸಲು ವಾಕ್ಯಗಳಿಂದ ಅಸಾಧ್ಯ ! ಒಟ್ಟನಲ್ಲಿ ಎದೆಹಾಲು ಶಿಶುವಿನ ಬೆಳವಣಿಗೆಗೆಂದೇ ದೇವರು ಸೃಷ್ಟಿಸಿರುವ ಅಮೃತ. ಮಗುವಿಗೆ ಹುಟ್ಟಿದ ತಕ್ಷಣದಿಂದ ಮೊದಲ 4-5 ತಿಂಗಳವರೆಗೆ ಎದೆಹಾಲಿನ ಹೊರತು ಬೇರೇನೂ ಬೇಡವೇ ಬೇಡ. ಮಗುವಿನ ಬೆಳವಣಿಗೆಯ ಈ ಮಹತ್ವಪೂರ್ಣ ಅವಧಿಯಲ್ಲಿ ಎದೆಹಾಲು ಮಾತ್ರ ಸಾಕು. ಈ ಹಾಲಿಗೆ ಸರಿಸಮನಾದ ಆಹಾರ ಇನ್ನೊಂದಿಲ್ಲ. ಇದು ಪ್ರಪಂಚದ ಎಲ್ಲಾ ಮಕ್ಕಳ ವೈದ್ಯರ ಅಭಿಮತ.

**ತಾಯಿ ಹಾಲಿನ ಪ್ರಯೋಜನಗಳು :**

1. ತಾಯಿಯ ಹಾಲೇ ಮಗುವಿಗೆ ಅತ್ಯಂತ ಪೌಷ್ಠಿಕವಾದ ಆಹಾರ. ಮಗುವಿನ ಬೆಳವಣಿಗೆಗೆ ಬೇಕಾದ ಎಲ್ಲಾ ಪೋಷಕಾಂಶಗಳನ್ನು ಇದು ಹೊಂದಿರುತ್ತದೆ.

2. ಇದಕ್ಕೆ ಯಾವುದೇ ಬೆಲೆ ತೆರಬೇಕಾಗಿಲ್ಲ. ಇದಕ್ಕೆ

ಡಾ॥ ಎನ್. ಎಸ್. ಪ್ರವೀಣ, ಎಂ. ಡಿ., ಕೇರಳ

ಬಡವ ಶ್ರೀಮಂತ ಎಂಬ ಭೇದ ಭಾವವಿಲ್ಲ. ಆದ್ದರಿಂದ ಬಡವರು ಹಣವಿಲ್ಲ ಎಂದು ಕೊರಗಬೇಕಾಗಿಲ್ಲ.

3. ಎದೆಹಾಲು ಅತ್ಯಂತ ಸುರಕ್ಷ. ಇದು ಕೆಡುವ ಸಂಭವನೇ ಇಲ್ಲ. ಕಾಯಿಸಬೇಕಾಗಿಲ್ಲ ಸಿದ್ಧಪಡಿಸಬೇಕಾಗಿಲ್ಲ.

4. ಎದೆಹಾಲಿನಲ್ಲಿ ಹಲವಾರು ರೋಗನಿರೋಧಕ ಅಂಶಗಳಿದ್ದು, ಮಗುವನ್ನು ಅಪಾಯಕಾರಿ ರೋಗಗಳಿಂದ ರಕ್ಷಿಸುತ್ತದೆ. ಎದೆಹಾಲನ್ನು ಸರಿಯಾಗಿ ಕುಡಿದ ಮಕ್ಕಳಲ್ಲಿ ಭೇದಿ, ಕೆಮ್ಮು, ಶ್ವಾಸಕೋಶದ ಕಾಯಿಲೆ ಸಾಧ್ಯತೆ ತುಂಬಾ ಕಡಿಮೆ. ಅದರಲ್ಲೂ ಮಗು ಜನಿಸಿದ ಮೊದಲ ಮೂರು ದಿನಗಳಲ್ಲಿ ಉತ್ಪತ್ತಿಯಾಗುವ ಹಾಲಿನಲ್ಲಿ ಕೊಲೋಸ್ಟ್ರಮ್ ಈ ರೋಗ ನಿರೋಧಕ ಅಂಶಗಳು ಅತ್ಯಧಿಕ ಪ್ರಮಾಣದಲ್ಲಿರುತ್ತವೆ. ಹೀಗೆ ಎದೆಹಾಲು ಮಗುವನ್ನು ಸರ್ವರೀತಿಯಿಂದಲೂ ರಕ್ಷಿಸುವ ಹೊಣೆ ಹೊತ್ತಿದೆ.

5. ಈ ಹಾಲನ್ನು ಜೀರ್ಣ ಮಾಡಲು ಮಗುವಿಗೆ ಯಾವುದೇ ತೊಂದರೆಯಾಗದು.

6. ಈ ಹಾಲು ಮಗುವಿನ ದೇಹಕ್ಕೆ ಅಗತ್ಯವಾದ ಉಷ್ಣತೆಗೆ ಅನುಗುಣವಾಗಿದೆ.

7. ಎದೆಹಾಲನ್ನು ಚೀಪುವುದರಿಂದ ಮಗುವಿನ ವಸಡು ಮತ್ತು ಹಲ್ಲುಗಳ ಬೆಳವಣಿಗೆಗೆ ಅತ್ಯುತ್ತಮ.

8. ಮಗು ಪೌಷ್ಠಿಕಾಂಶಗಳ ಕೊರತೆಯಿಂದ ಬಳಲದಂತೆ ಕಾಪಾಡುತ್ತದೆ [ಮೊದಲ 4 ತಿಂಗಳು].

9. ತಾಯಿ ಮಗುವಿನ ಭಾವನಾತ್ಮಕ ಸಂಬಂಧ ಇನ್ನೂ ನಿಕಟವಾಗುತ್ತದೆ.

**ತಾಯಿಗೆ ಆಗುವ ಪ್ರಯೋಜನಗಳು**

1 .ಹೆರಿಗೆ ಸಮಯದಲ್ಲಿ ದೊಡ್ಡದಾಗಿ, ಹೊಟ್ಟೆಯವರೆಗೆ ಏರಿದ ಗರ್ಭಕೋಶ ಮತ್ತೆ ಮರಳಿ ಸ್ವಸ್ಥಾನಕ್ಕೆ ಇಳಿಯಲು ಎದೆ ಹಾಲುಣಿಸುವಿಕೆ ಸಹಾಯ ಮಾಡುತ್ತದೆ.

2. ಎದೆಹಾಲು ಕುಡಿಸುವ ಸಂದರ್ಭದಲ್ಲಿ ತಾಯಿ ಮತ್ತೆ ಗರ್ಭ ಧರಿಸುವ ಸಾಧ್ಯತೆ ಕಮ್ಮಿ. ಒಂದು ರೀತಿಯಲ್ಲಿ ಇದು ಪ್ರಕೃತಿದತ್ತವಾದ ಸಂತಾನ ನಿಯಂತ್ರಣ ಕ್ರಮ.

3. ಶಿಶುಗಳಿಗೆ ಸರಿಯಾಗಿ ಎದೆಹಾಲುಣಿಸಿದ ತಾಯಂದಿರಲ್ಲಿ ಸ್ತನದ ಕ್ಯಾನ್ಸರ್ ಬರುವ ಸಾಧ್ಯತೆ ಇತರ ಸ್ತ್ರೀಯರಿಗಿಂತ ಕಡಿಮೆ ಎಂಬುದಾಗಿ ತಿಳಿದುಬಂದಿದೆ.

**ಆದಷ್ಟು ಬೇಗನೆ**

ಮಗು ಜನಿಸಿದ ನಂತರ ಎಷ್ಟು ಬೇಗನೆ ಸಾಧ್ಯವೊ, ಅಷ್ಟು ಬೇಗನೆ ಮಗುವಿಗೆ ಮೊಲೆ ಹಾಲುಣಿಸಬೇಕು. ಹುಟ್ಟಿದ 5–10 ನಿಮಿಷಗಳಲ್ಲಿ ಮಗುವಿಗೆ ಮೊಲೆ ಚೀಪಲು ಕೊಡಬೇಕು. ಸಿಸೇರಿನ್ ಶಸ್ತ್ರಚಿಕಿತ್ಸೆಯಿಂದ ಹೆರಿಗೆಯಾದಲ್ಲಿ ತಾಯಿ ಅರಿವಳಿಕೆಯ ಪ್ರಭಾವದಿಂದ ಹೊರಬರುತ್ತಿದ್ದಂತೆ ಹಾಲುಣಿಸಲು ಪ್ರಾರಂಭಿಸಬೇಕು.

**ಅಮೃತವನ್ನು ಎಸೆಯಬೇಡಿ !**

ಮೊದಲ 3–4 ದಿನಗಳವರೆಗೆ ತಾಯಿ ಬಲು ಕಡಿಮೆ ಹಾಲು ಉತ್ಪಾದಿಸುತ್ತಾಳೆ. ಈ ಹಾಲನ್ನು 'ಕೊಲಾಸ್ಟ್ರಂ' ಎನ್ನುತ್ತಾರೆ. ಇದು ಶಿಶುಗಳಿಗೆ ಬಹು ಪುಷ್ಟಿಯಾದ ಆಹಾರ. ಇದರಲ್ಲಿ ರೋಗ ನಿರೋಧಕ ಅಂಶಗಳಿರುತ್ತವೆ. ಆದರೆ ಕೆಲವರು ಇದು ಸೂಕ್ತವಾದ ಹಾಲಲ್ಲವೆಂದು ಕರೆದು ಚೆಲ್ಲುತ್ತಾರೆ. ಇದು ಅಮೃತವನ್ನು ಎಸೆದಂತೆ ! ಇದು ಕೆಲವರು ಮಗುವಿಗೆ ಹಾಲು ಸಾಕಾಗಲಿಕ್ಕಿಲ್ಲವೆಂದು ಬಾಟಲಿ ಹಾಲು ಕುಡಿಸುತ್ತಾರೆ. ಇದು ತಪ್ಪು. ಮಗುವಿಗೆ ಮೊಲೆ ಹಾಲು ಕುಡಿಸುವುದನ್ನು ಬಿಟ್ಟು ಬೇರೆ ಏನನ್ನೂ ಕುಡಿಸಬಾರದು. ಹೀಗೆ ಬಾಟಲಿ ಹಾಲು ಕುಡಿ

ಸುವುದರಿಂದ ಮಗು ಮೊಲೆ ಹಾಲು ಚೀಪುವ ಚೈತನ್ಯ ಕಳೆದು ಕೊಳ್ಳುತ್ತದೆ ಹಾಗೂ ಇದರಿಂದ ಎದೆಹಾಲಿನ ಉತ್ಪತ್ತಿಗೆ ಅಡ್ಡಿಯಾಗುತ್ತದೆ. ಬಾಟಲಿ ಹಾಲು ಭೇದಿ...ಇತ್ಯಾದಿ ಸೋಂಕು ರೋಗಗಳಿಗೆ ಆಹ್ವಾನವಿತ್ತಂತೆ ಕೂಡ.

ಪದೇ ಪದೇ ಮಗುವಿಗೆ ಹಾಲುಣಿಸಬೇಕು. ಮಗು ಚೀಪುತ್ತ ಹೋದಂತೆ ಹಾಲಿನ ಉತ್ಪಾದನೆ ಜಾಸ್ತಿ ಆಗುತ್ತದೆ. ಮಗುವಿಗೆ ಹಾಲುಣಿಸುವಾಗ ಸರಿಯಾದ ಭಂಗಿ ಅಗತ್ಯ. ಮಗುವಿನ ಬಾಯಿ ಮೊಲೆಯ ತೊಟ್ಟನಷ್ಟೆ ಚೀಪದೆ, ತೊಟ್ಟಿನ ಸುತ್ತಲೂ ಇರುವ ಕಪ್ಪಾದ ಭಾಗವನ್ನು ಎಷ್ಟು ಸಾಧ್ಯವೊ ಅಷ್ಟು ಚೀಪಬೇಕು. ಇದರಿಂದ ಮಗುವಿಗೆ ಸಮರ್ಪಕವಾಗಿ ಹಾಲು ದೊರಕುವುದಲ್ಲದೆ ಮೊಲೆ ತೊಟ್ಟಿನ ಬಿರುಕು, ಹುಣ್ಣು ಆಗದ ಹಾಗೆ ತಡೆಯುತ್ತದೆ. ಮೊಲೆಯಿಂದ ಶಿಶುವಿನ ಬಾಯನ್ನು ತೆಗೆಯುವಾಗ ಸಹ ಒಮ್ಮೆಗೆ ಎಳೆಯಬಾರದು. ನಿಧಾನವಾಗಿ ಹಂತ ಹಂತವಾಗಿಯೇ ಬಾಯನ್ನು ಹೊರತೆಗೆಯುವಂತೆ ನೋಡಿಕೊಳ್ಳಿ.

**ಪೌಷ್ಠಿಕ ಆಹಾರ ಮುಖ್ಯ :**

ಬಾಣಂತಿಯರಿಗೆ ಆಹಾರ ಅತಿ ಮಿತವಾಗಿ ನೀಡುತ್ತಾರೆ. ಇದು ಶುದ್ಧ ತಪ್ಪು. ಬಾಣಂತಿಯರಿಗೆ ಪುಷ್ಟಿದಾಯಕ ಆಹಾರ, ಎಲ್ಲ ರೀತಿಯ ತರಕಾರಿ, ಬೇಳೆ ಕಾಳುಗಳು, ಮೊಟ್ಟೆ, ಮೀನು ಮಾಂಸ, ಹಾಲು ಇತ್ಯಾದಿ ಮಾಮೂಲಿನಂತೆಯೇ ಹೆಚ್ಚಿನ ಪ್ರಮಾಣದಲ್ಲಿ ಕೊಡಬೇಕು. ಇದರಿಂದಾಗಿ ತಾಯಂದಿರೂ ಆರೋಗ್ಯವಂತರಾಗಿ ಮಕ್ಕಳ ಬೆಳವಣಿಗೆಗೆ ತಕ್ಕಂತೆ ಹಾಲು ಉತ್ಪತ್ತಿಯಾಗಲು ಸಹಾಯವಾಗುತ್ತದೆ. ಬಹಳಷ್ಟು ದ್ರವ ಪದಾರ್ಥಗಳನ್ನು ಸೇವಿಸುತ್ತಿರಬೇಕು.

**ದುರದೃಷ್ಟಕರ :**

ಇಷ್ಟೊಂದು ಪ್ರಾಮುಖ್ಯತೆಯಿರುವ ಈ ಎದೆಹಾಲನ್ನು ತಮ್ಮ ಶಿಶುಗಳಿಗೆ ಉಣಿಸಲು ಕೆಲ ತಾಯಂದಿರು ಹಿಂದೇಟು ಹಾಕುತ್ತಿರುವುದು ದುರದೃಷ್ಟಕರ ಹಾಗೂ ಏನೂ ತಿಳಿಯದ ಆ ಮುಗ್ಧ ಶಿಶುಗಳ ದೌರ್ಭಾಗ್ಯವೇ ಸರಿ. ಎದೆಹಾಲಿನ ಬಗೆಗಿನ ಅಜ್ಞಾನ, ಅಸಡ್ಡೆ, ಮೂಢನಂಬಿಕೆಗಳಿಂದಾಗಿ ಶಿಶು ನತದೃಷ್ಟವಾಗಬೇಕಾಗುತ್ತದೆ. ಪಾಶ್ಚಾತ್ಯ ಸಂಸ್ಕೃತಿಗೆ ಮರುಳಾಗಿ, ಎದೆಹಾಲನ್ನು ಕುಡಿಸುವುದು ಆಧುನಿಕತೆಯ ಲಕ್ಷಣವಲ್ಲ, ಎದೆಹಾಲನ್ನು ಕುಡಿಸಿದರೆ ತಮ್ಮ ಸೌಂದರ್ಯಕ್ಕೆ ಧಕ್ಕೆ, ರೂಪ ಕೆಡುತ್ತದೆ ಎಂಬ ತಪ್ಪು ಭಾವನೆ ಕೆಲವರಲ್ಲಿದೆ. ಮಾರುಕಟ್ಟೆಯ ಜಾಹೀರಾತುಗಳ ಹಾವಳಿಗೆ ಶರಣಾಗಿ, ಡಬ್ಬದ ಹಾಲಿನಪುಡಿ ನೀಡಿದಲ್ಲಿ ಮಗು ದುಂಡಾಗಿ ಬೆಳೆಯುತ್ತದೆ ಎಂಬ ಭ್ರಮೆ ಕೆಲವರಲ್ಲಿದೆ. ಹಾಗಾಗಿ ಕೆಲ ಶಿಶುಗಳು ಈ ಅಮೃತವನ್ನು ಸರಿಯಾಗಿ, ಪೂರ್ಣವಾಗಿ ಪಡೆಯುವ ಹಕ್ಕಿನಿಂದ ವಂಚಿತರಾಗುತ್ತಿದ್ದಾರೆ. ●

## ಮಡಿಕೇರಿ ನಗರದಲ್ಲೊಂದು ದಿ ಪೇರಿಯನ್ಸ್ ರೆಸ್ಟೋರೆಂಟ್

ನಗರದ ಕಾಲೇಜು ರಸ್ತೆಯಲ್ಲಿ ಹೊಸದಾಗಿ 'ದಿ ಪೇರಿಯನ್ಸ್' ಎಂಬ ನಮ್ಮವರ ರೆಸ್ಟೋರೆಂಟ್ ದಿನಾಂಕ 1-2-99 ರಿಂದ ಪ್ರಾರಂಭವಾಗಿದೆ. ಮಡಿಕೇರಿ ಶಾಸಕ ದಂಬೆಕೋಡಿ ಮಾದಪ್ಪ ಉದ್ಘಾಟಿಸಿದರು. ಮುಖ್ಯ ಅತಿಥಿಗಳಾಗಿ ಮಾಜಿ ಶಾಸಕ ಮುಂಡಂಡ ನಾಣಯ್ಯ ಆಗಮಿಸಿದ್ದರು. ಟೌನ್ ಬ್ಯಾಂಕಿನ ಮಾಜಿ ಅಧ್ಯಕ್ಷ ಕುಯ್ಯಮುಡಿ ಪೂಣಯ್ಯ, ಪುರಸಭೆ ಉಪಾಧ್ಯಕ್ಷ ದೇವಯ್ಯ, ಹೋಟೆಲ್ ಮಾಲಿಕೆ ಪೇರಿಯನ ಸಾವಿತ್ರಿಯವರು ವೇದಿಕೆಯಲ್ಲಿ ಉಪಸ್ಥಿತರಿದ್ದರು. ಪೇರಿಯನ ಪೂವಯ್ಯ ಜಯಾನಂದರವರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರೆ, ಶ್ಯಾಮ್ ವಂದಿಸಿದರೆಂದು ತಿಳಿದುಬಂದಿದೆ.

### ಹಿತ ನುಡಿ

ಉತ್ತಮವಾದ ಸ್ನೇಹವೆಂಬುದು ಜೀವನದಲ್ಲಿ ನಿಧಿ ದೊರೆತಂತೆ.

—ಸಾಕ್ರಟೀಸ್

## ಹಣ ಇದ್ದರೇನ್ ಗುಣ ಇಲ್ಲದ ಮ್ಯಾಲೆ

ದೇಶ ಇದ್ದರೇನ್ ಸ್ವಾತಂತ್ರ್ಯ ಇಲ್ಲದ ಮ್ಯಾಲೆ
ಭಾಗ್ಯ ಇದ್ದರೇನ್ ಆರೋಗ್ಯ ಇಲ್ಲದ ಮ್ಯಾಲೆ
ವಿದ್ಯೆ ಇದ್ದರೇನ್ ವಿನಯ ಇಲ್ಲದ ಮ್ಯಾಲೆ
ಮಾತ್ ಇದ್ದರೇನ್ ಬುದ್ಧಿ ಇಲ್ಲದ ಮ್ಯಾಲೆ
ತಲೆ ಇದ್ದರೇನ್ ಶಾಂತಿ ಇಲ್ಲದ ಮ್ಯಾಲೆ
ಗುರು ಇದ್ದರೇನ್ ಜ್ಞಾನ ಇಲ್ಲದ ಮ್ಯಾಲೆ
ಭಕ್ತಿ ಇದ್ದರೇನ್ ಯುಕ್ತಿ ಇಲ್ಲದ ಮ್ಯಾಲೆ
ಪ್ರಾಣ ಇದ್ದರೇನ್ ತ್ರಾಣ ಇಲ್ಲದ ಮ್ಯಾಲೆ
ಹಣ ಇದ್ದರೇನ್ ಗುಣ ಇಲ್ಲದ ಮ್ಯಾಲೆ
ವಿದ್ಯೆ ಇದ್ದರೇನ್ ವಿಚಾರ ಇಲ್ಲದ ಮ್ಯಾಲೆ
ಪ್ರೀತಿ ಇದ್ದರೇನ್ ತೋರ್ಸಿಕೆ ಆಗದ ಮ್ಯಾಲೆ
ಎಂತದ್ ಇದ್ದರೇನ್ ತೃಪ್ತಿ ಇಲ್ಲದ ಮ್ಯಾಲೆ

ಸಂಗ್ರಹ : ಕೊಡಕಂಡಿ ಜಮುನ, ಬೇಂಗೂರು.

# ಸರ್ಪಗಂಧ !

● ಕೌಂಡಿನ್ಯ

ಧಾರವಾಹಿ—1

ಕಾದಂಬರಿ ಓದುವ ಮುನ್ನ !

ಪ್ರೀತಿ, ಪ್ರೇಮ, ಕೋಪ, ದ್ವೇಷಗಳ ಭಾವನೆಗಳೊಂದಿಗೆ ನಿಗೂಢತೆಯನ್ನು ಅನಾವರಣಗೊಳಿಸುತ್ತಾ ಸಾಗುವ ಈ ಕಾದಂಬರಿಯ ಮೂಲ ವಸ್ತು ಲೇಖಕನ ಕಲ್ಪನೆ !

ಆದರೆ ಕಲ್ಪನೆಯೆಂಬುದು ಹೋಳಿಗೆ ಯಲ್ಲಿರುವ ಹೂರಣದಂತೆ ಹಿತ ಮಿತವಾಗಿ ನೈಜತೆಯ ಎಲ್ಲೆಯೊಳಗೆ ಸಾಗುತ್ತದೆ. ಈ ಕಾದಂಬರಿಗೆ ಗ್ರಂಥದ ಆಧಾರ ಇದೆ !

ಅದೇ 'ನವರಾಗ ಮಂಜರಿ !' ಅಂದರೆ ಈ ಗ್ರಂಥವೊಂದು ಭಾರತದ ಮಹಾ ಅರಣ್ಯದಲ್ಲಿ ಬೆಳೆದಿರುವ ವಿವಿಧ ರೀತಿಯ ಸಸ್ಯಗಳ ಬಗ್ಗೆ ಮಾಹಿತಿ ನೀಡುತ್ತದೆ. ಈ ಸಸ್ಯಗಳು ತುಂಬಾ ಅವಶ್ಯಕ !

ಈ ಸಸ್ಯಗಳು ಕದಂಬ. ಕೇದಿಗೆ, ಜಾಬಲಿ, ಅರತುಂಗ ಮತ್ತು ಚಂಗಲ್ವ, ಪುನಾಗ ಮುಂತಾದವುಗಳು !

ಇದರ ವಿರುದ್ಧ ಸಸ್ಯವೇ ನಾಗದಾಳಿ ! ಈ ಹೆಸರನ್ನು ಯಾರೂ ಕೇಳಿಲ್ಲ. ಹಳ್ಳಿ ಗಳಲ್ಲಿ ಪ್ರತಿಯೊಬ್ಬರ ಮನೆಗಳಲ್ಲು ಸಹ ನಾಗದಾಳಿ ಬೆಳೆಯುತ್ತಾರೆ. ನಾಗದಾಳಿ ಸಸ್ಯ ಇರುವ ಕಡೆ ಹಾವುಗಳು ಬರುವುದಿಲ್ಲ!

ಹಾವುಗಳನ್ನು ತನ್ನ ಕಡೆಗೆ ಆಕರ್ಷಿ ಸುವ ಮಧುರ ಸುವಾಸನೆಯುಳ್ಳ ಸಸ್ಯಗಳೇ ನವರಾಗಮಂಜರಿ !

ಅದಕ್ಕೆ ವಿರುದ್ಧ ಸಸ್ಯ ನಾಗದಾಳಿ ! ಕಾದಂಬರಿಯಲ್ಲಿ ಅಗತ್ಯವಾಗಿ ಬಳಸಿ ಕೊಳ್ಳುವ ಈ ಸಸ್ಯಗಳ ಬಗ್ಗೆ ಗ್ರಂಥ ಮಾಹಿತಿ ನೀಡಿದ್ದೇನೆ. ಇನ್ನು ಕತೆಯ ಬೆಳವಣಿಗೆಯ ಕಡೆ ಗಮನವನ್ನು ನೀಡೋಣ !

* * *

ತಾತಯ್ಯನವರ ಪ್ರತಿಮೆ ಅದು ಇರು ವುದು ಮೈಸೂರಿನ ಸಿಟಿ ಬಸ್ಸು ನಿಲ್ದಾಣದ ಎದುರು ! ಈ ಪ್ರತಿಮೆಯನ್ನು ವೃದ್ಧ ಪಿತಾಮಹ ದಯಸಾಗರ ವೆಂಕಟಕೃಷ್ಣಯ್ಯ ನವರ ನೆನಪಿಗಾಗಿ ನಿರ್ಮಿಸಿದ್ದಾರೆ !

ಮಧ್ಯಾಹ್ನ ಮೂರು ಗಂಟೆ !

ರೇವತಿ ಅಲ್ಲಿಯೇ ಇದ್ದ ಫಲಾಮೃತದಲ್ಲಿ ತಂಪು ಪಾನೀಯವನ್ನು ಕುಡಿದು ಹೊರ ಬಂದಳು. ಪತ್ರಿಕೆಯನ್ನು ಮಾರುತ್ತಿದ್ದ ಹುಡುಗನಿಂದ ಸಂಜೆವಾಣಿಯನ್ನು ಖರೀ ದಿಸಿ ಆಟೋದಲ್ಲಿ ತನ್ನ ಮನೆಗೆ ಬಂದಳು.

ರೇವತಿ ಇಪ್ಪತ್ತರ ಪ್ರಾಯದ ಚೆಲುವೆ! ಗೋಧಿಯ ಮೈ ಬಣ್ಣ ! ಯೌವ್ವನ ಪೂರಿತವಾದ ಮೈಮಾಟ ಆಕರ್ಷಕ ಶರೀರ ವಿನ್ಯಾಸ!

ಚಂಚಲ ನೇತ್ರಗಳು !

ಅವುಗಳಲ್ಲಿ ಸೂಜಿಗಲ್ಲಿನ ಸೆಳೆತವಿದೆ. ವಿಚಿತ್ರ ರೀತಿಯ ಹೊಳಪಿನಿಂದ ಮಿನುಗು ತ್ತಿದೆ !

ಫ್ಯಾನಿನ ಗಾಳಿಗೆ ಹಾರಾಡುತ್ತಿದ್ದ ತಲೆಯ ಕೂದಲನ್ನು ಸರಿಪಡಿಸಿಕೊಂಡು ಪತ್ರಿಕೆಯನ್ನು ಓದುತ್ತಿದ್ದಾಳೆ.

ಅದರಲ್ಲಿದ್ದ ಎರಡು ಸುದ್ದಿಗಳು ಇವ ಳನ್ನು ಈಗ ವಿಶೇಷವಾಗಿ ಆಕರ್ಷಿಸಿದವು.

ಒಂದನೆಯ ಸುದ್ದಿ !

ಸಂಪಿಗೆ ಪುರದಲ್ಲಿ ಮರದ ಎತ್ತರಕ್ಕೆ ಬೆಳೆದು ನಿಂತಿರುವ ಮೂರು ಭಾರೀ ಹುತ್ತ ಗಳ ಸಂಗಮ !

ಹತ್ತು ಅಡಿಗಳಿಗಿಂತಲೂ ಜಾಸ್ತಿಯಾಗಿ ಬೆಳೆದಿರುವ ಈ ಮೂರು ಹುತ್ತಗಳು ಒಂದೇ ಜಾಗದಲ್ಲಿ ಇದೆ !

ಪತ್ರಿಕೆಯಲ್ಲಿ ಹುತ್ತಗಳ ಫೋಟೋ ಇತ್ತು ! ಇಂತಹ ದೊಡ್ಡ ಹುತ್ತ ನಮ್ಮ ರಾಜ್ಯದಲ್ಲೇ ಬೇರೆಲ್ಲೂ ಇರಲಾರದು ಎಂದು ಹಲವಾರು ವೀಕ್ಷಕರ ಅಭಿಪ್ರಾಯ !

## ಲೇಖಕರ ಪರಿಚಯ

'ಕೌಂಡಿನ್ಯ ಕಾವ್ಯ ನಾಮದಲ್ಲಿ ಧಾರವಾಹಿ ಕಾದಂಬರಿಗಳನ್ನು ರಚಿಸುತ್ತಿರುವ ಶ್ರೀ ವೈ. ಎನ್. ನಾಗೇಶ್ ಅವರು ಇದುವರೆಗೂ ಐವತ್ತು ಕಾದಂಬರಿಗಳನ್ನು ರಚಿಸಿ ದ್ದಾರೆ. ಇವರ ಪ್ರತಿಯೊಂದು ಕಾದಂಬರಿಯೂ ನಾಡಿನ ಜನಪ್ರಿಯ ಪತ್ರಿಕೆಗಳಾದ 'ತರಂಗ', 'ಮಂಗಳ', 'ಕನ್ನಡ ಪ್ರಭ', 'ಕರ್ಮವೀರ', 'ಮಯೂರ', 'ಮೈಸೂರು ಮಿತ್ರ', 'ಮಲ್ಲಿಗೆ' ಮುಂತಾದ ನಾಡಿನ ಎಲ್ಲಾ ಪತ್ರಿಕೆಗಳಲ್ಲೂ ಬೆಳಕು ಕಂಡು ಜನಪ್ರಿಯವಾಗಿವೆ.

ಕೌಂಡಿನ್ಯ ಅವರ ಹಲವಾರು ಕಾದಂಬರಿಗಳು ದೂರದರ್ಶನದಲ್ಲಿ ಧಾರಾವಾಹಿ ಗಳಾಗಿ ಪ್ರಸಾರವಾಗಿ ಜನಪ್ರಿಯವಾಗಿದೆ.

ಕೊಡಗು ಸಂಗಾತಿ ಸಹೃದಯದ ಓದುಗರಿಗಾಗಿ ಕೌಂಡಿನ್ಯ ಅವರು 'ಸರ್ಪಗಂಧ' ಎಂಬ ವಿಭಿನ್ನ ರೀತಿಯ ಕಾದಂಬರಿಯನ್ನು ರಚಿಸಿದ್ದಾರೆ. ಅದು ಓದುಗರನ್ನು ರಂಜಿಸುತ್ತದೆ ಎಂಬ ನಂಬಿಕೆ ನಮ್ಮದು.

—ಸಂಪಾದಕಿ

ಈ ಹುತ್ತ ಸರ್ಪಗಳ ವಾಸಸ್ಥಾನ ! ಇದರಲ್ಲಿ ಅಸಂಖ್ಯಾತ ವಿವಿಧ ರೀತಿಯ ವಿಷ ಸರ್ಪಗಳು ಸೇರಿಕೊಂಡಿದೆ ಎಂದು ಊರಿನವರ ಅಭಿಪ್ರಾಯ !

ನಾಗ ಪಂಚಮಿಯ ದಿನ ಮಾತ್ರ ಊರಿನವರೆಲ್ಲಾ ಒಟ್ಟಾಗಿ ಸೇರಿ ಹುತ್ತಕ್ಕೆ ಪೂಜೆಯನ್ನು ಮಾಡುತ್ತಾರೆ !

ಹುತ್ತದ ಬಗ್ಗೆ ವಿಚಿತ್ರ ದಂತಕಥೆಗಳಿವೆ !

ಭಯಾನಕ ದಂತ ಕತೆ ಇದೆ !

ಸಂಪಿಗೆ ಪುರದ ಹುತ್ತದ ಬಗ್ಗೆ ನಾಳೆಯ ಸಂಚಿಕೆಯಲ್ಲಿ ಮತ್ತಷ್ಟು ವಿವರಗಳನ್ನು ನೀಡಲಾಗುವುದು.

ಪತ್ರಿಕೆಯನ್ನ ಓದುತ್ತಿದ್ದ ರೇವತಿ ಗುಲಾಬಿಯ ಪಕಳೆಯಂತೆ ಇದ್ದ ತನ್ನ ಜೇನು ತುಟಿಗಳನ್ನು ಚಿಗುಟಿ ಬೆರಳಿನಿಂದ ಸವರಿಕೊಂಡಳು. ಸಂಪಿಗೆ ಮರ ಎಂದ ಕೂಡಲೇ ಅವಳಿಗೆ ತನ್ನ ಗೆಳತಿ ಮೀನಳ ನೆನಪಾಯಿತು.

ಮೀನ ಪತ್ರ ಬರೆದಿದ್ದಳು! ಗೆಳತಿಯನ್ನು ತನ್ನೂರಿಗೆ ಆಹ್ವಾನಿಸಿದ್ದಳು. ಅದರೊಂದಿಗೆ ತನ್ನ ಊರು ನಿಗೂಢತೆಯ ಹುತ್ತ ಎಂದು ಬರೆದಿದ್ದಳು !

ಇಲ್ಲಿ ನಿಗೂಢ ಜನಗಳಿದ್ದಾರೆ. ! ಕಲ್ಪನೆಗೂ ಮೀರಿದ ಮೈ ನವಿರೇಳಸುವ ಕುತೂಹಲಕಾರಿ ಘಟನೆಗಳು ಇಲ್ಲಿ ಆಗಾಗ ನಡೆಯುತ್ತದೆ !

ನೀನು ಈ ಊರಿಗೆ ಬಂದರೆ ಎಲ್ಲವನ್ನೂ ತೋರಿಸಿ ವಿವರಿಸುತ್ತೇನೆ. ನನಗೋಸ್ಕರ ಬರಲೇಬೇಕು.

ಇದು ಗೆಳತಿಯ ಪತ್ರದ ಸಾರಾಂಶ !

ಮೀನ ಮತ್ತು ರೇವತಿ ಮೈಸೂರಿನ ಗಂಗೋತ್ರಿಯಲ್ಲಿ ಓದುತ್ತಿದ್ದರು. ಪರೀಕ್ಷೆ ಮುಗಿದ ಕೂಡಲೇ ಮೀನ ತನ್ನ ಊರಾದ ಸಂಪಿಗೆ ಪುರಕ್ಕೆ ಹೋಗಿದ್ದಳು. ಅಲ್ಲಿಗೆ ಹೋದ ಎರಡು ದಿನಗಳಲ್ಲಿ ಪತ್ರ ಬರೆದಿದ್ದಳು.

ಈ ಸಂಪಿಗೆ ಪುರಕ್ಕೆ ಸುಬಂಧಿಸಿರುವ ಮತ್ತೊಂದು ಸುದ್ಧಿ ಅದೇ ಪತ್ರಿಕೆಯಲ್ಲಿ ಪ್ರಕಟವಾಗಿತ್ತು !

ಅದನ್ನು ಸುದ್ಧಿ ಎನ್ನುವುದಕ್ಕಿಂತ ಜಾಹೀರಾತು ಎಂದು ಪ್ರಕಟನೆ ಸೂಕ್ತ ಎನಿಸುತ್ತದೆ.

ವಧು ಬೇಕಾಗಿದೆ !

ಸಂಪಿಗೆ ಪುರದ ಲಕ್ಷ್ಮಾದೀಶ್ವರ ಎಡತೊರೆ ಮನೆತನದ ಮಹಾಲಿಂಗ ಎಂಬ ಯುವಕನಿಗೆ ವಧು ಬೇಕಾಗಿದ್ದಾಳೆ !

ಮಹಾಲಿಂಗ ಮನೆಯ ಯಜಮಾನ ಶ್ರೀಮಂತಿಕೆಯ ಸಾಕಾರ !

ವಿದ್ಯಾವಂತನಾಗಿರುವ ಈ ಶ್ರೀಮಂತ ಕುವರನಿಗೆ ನೋಡಲು ಆಕರ್ಷಕ ಸೌಂದರ್ಯ ಇರುವ ಓದಿರುವ ಯುವತಿ ಬೇಕಾಗಿದ್ದಾಳೆ. ಜಾತಕದ ಅಗತ್ಯ ಇಲ್ಲ. ಇತ್ತೀಚಿಗಿನ ಭಾವ ಚಿತ್ರದೊಂದಿಗೆ ವಿವರಗಳನ್ನು ನೀಡಿ ಆಸಕ್ತಿ ಇರುವವರು ಬರೆದುಕೊಳ್ಳಿ. ವಧುವಿನ ಆಯ್ಕೆ ನಡೆದ ನಂತರ ಈ ಶ್ರೀಮಂತಿಕೆಗೆ ತಕ್ಕಂತೆ ಎಡತೊರೆ ಮನೆತನದವರೇ ಎಲ್ಲಾ ಖರ್ಚುಗಳನ್ನು ಹಾಕಿಕೊಂಡು ಮದುವೆಯನ್ನು ಮಾಡಿಕೊಳ್ಳುತ್ತಾರೆ.

ವಿಳಾಸವನ್ನು ನೀಡಲಾಗಿತ್ತು !

ಓದು ಮುಗಿಸಿದ ನಂತರ ರೇವತಿ ಪತ್ರಿಕೆಯನ್ನು ಎದುರಿಗೆ ಇದ್ದ ಟೀಪಾಯಿಯ ಮುಂದೆ ಎಸೆದಳು.

ಅವಳ ಮುಖದಲ್ಲಿ ನಗು ಮೂಡಿತು !

ಶ್ರೀಮಂತ ವರನ ಹೆಸರು ಮಹಾಲಿಂಗ ಅಂತೆ! ಥೂ...ಅವನ ಹೆಸರೇ ಚೆನ್ನಾಗಿಲ್ಲ. ಇನ್ನು ಅವನು ಹೇಗಿದ್ದಾನೊ?

ಈ ಶ್ರೀಮಂತನಿಗೆ ಆ ಊರಿನಲ್ಲಿ ಹೆಣ್ಣು ಕೊಡುವವರು ಯಾರೂ ಇಲ್ಲ ಅಂತ ಪತ್ರಿಕೆಗೆ ಜಾಹೀರಾತು ನೀಡಿರುವನೆ !

ಪಕ್ಕನೆ ಗೆಳತಿ ಮೀನ ನೆನಪಾದಳು !

ಮೀನ ಅದೇ ಊರಿನವಳು ! ಅವಳು ನೋಡಲು ನನ್ನಷ್ಟೇ ಚೆನ್ನಾಗಿದ್ದಾಳೆ ! ಅವಳು ಅಪ್ಲಿಕೇಷನ್ ಹಾಕಿರಬಹುದೆ ?

ಶ್ರೀಮಂತ ಗಂಡು ಸಿಗುತ್ತಾನೆ ಎಂದರೆ ಯಾರು ತಾನೇ ನಿರಾಕರಿಸುತ್ತಾರೆ! ಮೀನ ಪ್ರಯತ್ನಿಸಿರಬಹುದೆ !

ರೇವತಿಯ ಕಣ್ಣುಗಳು ಅರಳಿತು !

ಕೆಂದುಟಿಗಳಲ್ಲಿ ನಗು !

ಹೌದು ನಾನೇಕೆ ಪ್ರಯತ್ನಿಸಬಾರದು ! ನನಗೆ ಸೌಂದರ್ಯದ ಜೊತೆಗೆ ವಿದ್ಯೆ ಇದೆ !

ಅವಳು ಸೀರಿಯಸ್ ಆಗಿ ಥಿಂಕ್ ಮಾಡುತ್ತಿಲ್ಲ. ಇದನ್ನು ಒಂದು ರೀತಿಯ ಜೋಕ್ ಅಂತ ತಿಳಿದಿದ್ದಾಳೆ.

ನಾನು ಅಪ್ಲಿಕೇಶನ್ ಹಾಕುತ್ತೇನೆ !

ಸಂಪಿಗೆ ಪುರಕ್ಕೆ ಹೋಗುತ್ತೇನೆ !

ಈ ಎರಡು ಆಲೋಚನೆಗಳು ಸಹ ರೇವತಿಗೆ ಬರಲೇಬಾರದಿತ್ತು ! ಇದನ್ನು ಜೋಕ್ ಅಂತ ಭಾವಿಸಿ ಅವಳಾಗಿಯೇ ಅಪಾಯವನ್ನು ಆಹ್ವಾನಿಸಲು ಸಿದ್ಧಳಾಗುತ್ತಿದ್ದಳು !

[ಸಶೇಷ]

---

## ಸುಂದರ ಕೊಡಗು ನಾಡು

ಸುಂದರವಿದು ಈ ನಾಡು
ಅಂದ ಚೆಂದದ ಕಾವೇರಿನಾಡು
ಪುಣ್ಯಪುರುಷರು ಜನಿಸಿಹರಿಲ್ಲಿ
ಜೀವ ನದಿಗಳು ಹಂದಿಹುದಿಲ್ಲಿ
ಹಲವು ಭಾಷೆಯ ಜನರೆಲ್ಲಾ
ಒಟ್ಟಿಗೆ ಕೂಡಿ ನಲಿದಿಹರಿಲ್ಲಿ
ಕಾವೇರಿ ದೇವಿಯ ಸೊಬಗು
ಕಾಫಿ, ಕಿತ್ತಳೆ, ಏಲಕ್ಕಿ ಸಿರಿಯ ಬೆಡಗು
ತುಂಬಿ ಹರಿಯುವ ಕಾವೇರಿಯ
ನೋಡಲು ಸಂತಸ ಎಂದಿಗೂ
ಹಸಿರಿನ ಚೆಲುವಿನ ಬೀಡು
ಕವಿಗಳು ಹಾಡಿದ ನಾಡು
ಭಾರತಮಾತೆಯ ಕೀರ್ತಿಯ ಗಡಿನಾಡು
ನಮ್ಮ ಹೆಮ್ಮೆಯ ಕೊಡಗು ನಾಡು

ಸಂಗ್ರಹ : ಅನೆಮನೆ ದೇವಪ್ಪನವೀನ್

# ಕುಶಾಲನಗರದಲ್ಲಿ ವಿಜೃಂಭಿಸಿದ ಗೌಡ ಜನಾಂಗದ ಸಂತೋಷ ಕೂಟ

ಕುಶಾಲನಗರದ ಪಟ್ಟಣ ವಿತಿಯಲ್ಲಿರುವ ಗೌಡಬಾಂಧವರ ಸಂತೋಷ ಕೂಟ ಸಮಾರಂಭವು ತಾ॥ 14-2-99ರಂದು ಕುಶಾಲನಗರ ಗೌಡ ಸಮಾಜದಲ್ಲಿ ಬಹಳ ವಿಜೃಂಭಣೆಯಿಂದ ನೆರವೇರಿತು. ಸುಮಾರು 800ಜನ ಸಮೂಹವಿದ್ದ ಸಂತೋಷಕೂಟ ಸಮಾರಂಭದಲ್ಲಿ ಮೊದಲಿಗೆ ಪ್ರಾಸ್ತಾವಿಕ ಭಾಷಣ ಮಾಡಿದ ಸಮಿತಿಯ ಅಧ್ಯಕ್ಷ ಶ್ರೀ ತೆಕ್ಕಡೆ ನೇಮಿರಾಜ್‌ರವರು ಬೆಂಗಳೂರಿನಲ್ಲಿರುವ ನ್ಯಾಯವಾದಿ ಶ್ರೀ ಪೊನ್ನೆಟ್ಟಿ ಪೊನ್ನಪ್ಪನವರನ್ನು ವೇದಿಕೆಗೆ ಆಹ್ವಾನಿಸಿ ಸ್ವಾಗತಿಸಿ ಮಾಲಾರ್ಪಣೆ ಮಾಡಿದರು. ಮತ್ತು ಕೊಡಗು ಜಿಲ್ಲಾ ಪರಿಷತ್ ಅಧ್ಯಕ್ಷ ಶ್ರೀ ಊರುಬೈಲು

ವರದಿ : **ಕೆ. ಎಂ. ಬಸಪ್ಪ**, ಕುಶಾಲನಗರ

ಜಯಪ್ರಕಾಶ್‌ರವರನ್ನು ಸಂತೋಷಕೂಟದ ವತಿಯಿಂದ ಸನ್ಮಾನಿಸಲಾಯಿತು. ಸಂತೋಷ ಕೂಟದ ಹಿಂದಿನ ದಿನವೇ ನೆರವೇರಿಸಿದ ಸಾಂಸ್ಕೃತಿಕ ಕಾರ್ಯಕ್ರಮ ಹಾಗೂ ಸಂಗೀತ ಕಾರ್ಯಕ್ರಮಗಳಾದ ಭಾವಗೀತೆ, ಭಕ್ತಿಗೀತೆ, ಜಾನಪದ ಗೀತೆ, ಚಿತ್ರಗೀತೆ ಕಾರ್ಯಕ್ರಮಗಳನ್ನು ನಡೆಸಿ ಬಹುಮಾನ ವಿಜೇತರನ್ನು ಸಮಾರಂಭದಲ್ಲಿ ಸನ್ಮಾನಿಸಲಾಯಿತು. ಗಂಡಸರ ವಿಭಾಗದ ಕಾರ್ಯಕ್ರಮವನ್ನು ಸಂಘದ ಸಂಚಾಲಕರಾದ ಶ್ರೀ ಕುದುಕುಳಿ ಲೋಕೇಶ್ ಹಾಗೂ ಯುವಕ ಸಂಘದವರು ಮತ್ತು ಹೆಂಗಸರ ವಿಭಾಗವನ್ನು ಶ್ರೀಮತಿ ಕುದುಪಜೆ ಶಾಂತಿ ಬೋಜಪ್ಪನವರು ಶ್ರೀಮತಿ ದಬ್ಬಡ್ಕ ದಾಟೆ ಮುತ್ತಪ್ಪ ಹಾಗೂ ಕಮಲಾ ಗಣಪತಿಯವರು ನೆರವೇರಿಸಿಕೊಟ್ಟರು.

ಸನ್ಮಾನಿತರಾದ ಶ್ರೀ ಊರುಬೈಲು ಜಯಪ್ರಕಾಶ್‌ರವರು ಮಾತನಾಡಿ ಜಿಲ್ಲೆಯಲ್ಲಿ ಪ್ರಥಮವಾಗಿ ರಾಜಕೀಯದ ಉನ್ನತ ಹುದ್ದೆಯನ್ನು ಪಡೆದ ಬಗ್ಗೆ ಹೆಮ್ಮೆಯನ್ನು ವ್ಯಕ್ತಪಡಿಸಿ ಸರಕಾರದಿಂದ ಗೌಡ ಸಮಾಜ ಮತ್ತು ಇನ್ನಾವುದೇ ಸಮಾಜಗಳಿಗೆ ಮತ್ತು ಯುವ ಜನತೆಯ ಅಭಿವೃದ್ಧಿಗೆ ಪ್ರೋತ್ಸಾಹಗಳನ್ನು ಒದಗಿಸುವಂತೆ ಪ್ರಯತ್ನ ನಡೆಸುವುದಾಗಿಯೂ ಮತ್ತು ಎಲ್ಲಾ ಜನಾಂಗದವರಲ್ಲಿ ಸಹಬಾಳ್ವೆಯಿಂದ ಬೆರೆತು ಅಭಿವೃದ್ಧಿ ಪಥದಲ್ಲಿ ಸಾಗಬೇಕೆಂದು ಹಲವು ಹಿತನುಡಿಗಳನ್ನು ನೀಡಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ ಶ್ರೀ ಪೊನ್ನೆಟ್ಟಿ ಪೊನ್ನಪ್ಪನವರು ಮಾತನಾಡಿ ಹಳ್ಳಿ ವಾತಾವರಣದಲ್ಲಿ ಬಡತನ ರೇಖೆಯಲ್ಲಿ ಬೆಳೆದು ಬಂದ ವಿಧಾನ ಮತ್ತು ಯುವ ಜನಕ್ಕೆ ಹಳ್ಳಿ ವಾತಾವರಣದಲ್ಲಿ ಇಂಗ್ಲಿಷ್ ಇನ್ನಿತರ ಉತ್ತಮ ಮಾಧ್ಯಮದ ವಿದ್ಯಾಭ್ಯಾಸದ ಸೌಲಭ್ಯವಿಲ್ಲದೆ ಪರಿಜ್ಞಾನದ ಕೊರತೆಯಿರುವುದು ಮತ್ತು ಇಂಗ್ಲಿಷ್ ಬಲ್ಲವರು ಹೊರದೇಶಗಳಲ್ಲಿಯೂ ಖ್ಯಾತಿ ಪಡೆಯಬಹುದು. ಮೊದಲು ಭಾಷಾ ಪರಿಜ್ಞಾನದ ಅಡಿಪಾಯಗಳು ಬೇಕು. ಅರೆಕನ್ನಡ ನಮ್ಮ ಆಡುಭಾಷೆಯಾಗಿದ್ದು ಅದನ್ನು ನಮ್ಮ ವ್ಯವಹಾರಿಕ ಜ್ಞಾನದಲ್ಲಿ ಬಳಸಿ, ಎಲ್ಲಾ ಭಾಷೆ ಮತ್ತು ಜನಾಂಗದವರಲ್ಲಿ ಸಹಬಾಳ್ವೆಯಿಂದ ಬೆರೆತು ಪರಿಜ್ಞಾನವನ್ನು ಬೆಳೆಸಬೇಕು. ಹಳ್ಳಿಗಳಲ್ಲಿ ಎಂತಹ ಪ್ರಭಾವಿತ ವ್ಯಕ್ತಿ ಇದ್ದರೂ ಅವರ ಮರಣಾ ನಂತರ ಅವರ ಹೆಸರಿನಲ್ಲಿ ರಸ್ತೆ, ಶಾಲೆ ಇನ್ನಿತರ ಕಟ್ಟಡಗಳಿಗೆ ಹೆಸರಿಡುವಲ್ಲಿ ನಾವು ಸೂಚಿಸಬೇಕು. ಮತ್ತು ಗೌಡ ಜನಾಂಗದಲ್ಲಿ ಬರೀ Gowda ಮತ್ತು Gouda ಎಂಬ ಪದದ ಅಕ್ಷರದ ವ್ಯತ್ಯಾಸದಲ್ಲಿ 4% ಸರಕಾರದಿಂದ ಸಿಗುವ ಆದ್ಯತೆ ತಪ್ಪಿಹೋದ ವಿಚಾರವನ್ನು ವಿವರಿಸಿದರು.

ಈಗಿನ ಯುವ ಜನತೆ ಅಮಲು ಪದಾರ್ಥ ಇನ್ನಿತರ ದುಶ್ಚಟಗಳಲ್ಲಿ ಬಾಗಿಯಾಗಿ, ಆರೋಗ್ಯ ಮತ್ತು ಜ್ಞಾನಶಕ್ತಿ ಬೆಳವಣಿಗೆ ಕುಂಟಿತವಾಗಿ ಬರೀ ಕಾಫಿ ತೋಟದ ಹಣದಲ್ಲಿ ದುರಾಲೋಚನೆಯಲ್ಲಿ ಮೆರೆದು ಹಾಳಾಗುತ್ತಿರುವ ಬಗ್ಗೆ ತುಂಬಾ ವಿಷಾದ ವ್ಯಕ್ತಪಡಿಸಿದರು. ನಮ್ಮ ಕೊಡಗಿನವರು ಪೊಲೀಸ್, ಮಿಲಿಟರಿ ಇನ್ನಿತರ ಹುದ್ದೆಗಳಲ್ಲಿ ಬೇಕಾದಷ್ಟಿದ್ದು ಐ.ಎ.ಎಸ್., ಐ.ಪಿ.ಎಸ್. ಗಳಲ್ಲಿರುವ ಬಗ್ಗೆ ರಾಜಕೀಯದ ಪ್ರೇರಣೆ ಇರುವುದರಿಂದ ಎರಡರಲ್ಲಿ ಬೆರೆತು ಮುಂದೆ ಬರಬೇಕೆಂದು ಮತ್ತು ಎಲ್ಲಾ ಸಂಘ ಸಂಸ್ಥೆಗಳಲ್ಲಿ ಪಾಲ್ಗೊಂಡು ಬದುಕುವುದನ್ನು ಕಲಿತುಕೊಳ್ಳಬೇಕೆಂದು ಹಿತನುಡಿಗಳನ್ನು ನುಡಿದರು.

ಸಮಾರಂಭದ ಅಧ್ಯಕ್ಷ ಶ್ರೀ ಕೋರನ ಪೂಣಚ್ಚನವರು ಮಾತನಾಡಿ ಕುಶಾಲನಗರ ಗೌಡ ಸಮಾಜ ಬೆಳೆದ ವಿಧಾನ ಮತ್ತು ಸಂಘದ ಅಧ್ಯಕ್ಷ ಶ್ರೀ ಕೊಂಪುಳಿ ಸೋಮಪ್ಪನವರು ಬೆಳೆಸಿದ ಸಂಘ. ಅದನ್ನು ಯುವ ಜನತೆ ಮುಂದುವರಿಸಲು ಸಂಪೂರ್ಣ ಸಹಕಾರ ನೀಡುವ ಭರವಸೆಯನ್ನು ನೀಡಿದರು. ಆಟೋಟ ಮತ್ತು ಸಾಂಸ್ಕೃತಿಕ ಕಾರ್ಯಕ್ರಮದ ಬಹುಮಾನ ವಿಜೇತರಿಗೆ ಶ್ರೀ ಕೋರನ ಗಂಗಮ್ಮ, ಪೂಣಚ್ಚ ಮತ್ತು ಪೊನ್ನೆಟ್ಟಿ ಶಾಂತಿ ಪೊನ್ನಪ್ಪ ಹಾಗೂ ಹಗ್ಗ ಜಗ್ಗುವ ಸ್ಪರ್ಧೆ, ಕೊಡಗಿನ ಕುಣಿತ ಕಾರ್ಯಕ್ರಮದ ಬಹುಮಾನ ವಿಜೇತರಿಗೆ ಶ್ರೀಮತಿ ಕುದುಪಜೆ ಗೌರಮ್ಮನವರು ಬಹುಮಾನ ವಿತರಣೆ ಮಾಡಿದರು. ಎಸ್ ಎಸ್.ಎಲ್.ಸಿ. ಮತ್ತು ಪಿ.ಯು.ಸಿ. ಯಲ್ಲಿ ಹೆಚ್ಚಿನ ಅಂಕಗಳಿಸಿದ ಅಯ್ಯಂಡ್ರ ಭಾಗ್ಯ ಮತ್ತು ಪೆರುಬಾಯಿ ರೇಖಾ ಇವರು ಸನ್ಮಾನಿಸಲ್ಪಟ್ಟರು.

[13ನೇ ಪುಟ ನೋಡಿ]

## ಗೌಡರ ಪದ್ಧತಿಗಳು

### ಬಯಕೆ ಮದುವೆ (ಶೀಮಂತ)

[ಮುಂದುವರೆದ ಭಾಗ]

ಕನ್ಯೆಯನ್ನು ವಿವಾಹ ಮಾಡಿಕೊಟ್ಟು ಗರ್ಭವತಿಯಾದಾಗ ವರನ ಮನೆಯವರು ಹೆಣ್ಣಿನ ಮನೆಗೆ ಸಮಾಚಾರವನ್ನು ತಿಳಿಸುವರು. ಈ ಗರ್ಭದ ಕಾಲ ನವ ವಧುವಿನ ಜೀವನದಲ್ಲಿ ಮೊದಲನೆ ತಾಯಿಯಾಗುವ ಬಯಕೆ. ಆಗ ಅವಳ ಮನಸ್ಸಿಗೆ ಆನಂದವೂ, ಉಲ್ಲಾಸವೂ ಇರುವುದು. ಮೊದಲನೆಯ ಬಾಣಂತನ ತವರು ಮನೆಯಲ್ಲಿ ಆಗುವುದು ರೂಢಿ. ಇದು ಅವಳ ಬಯಕೆ.

ಮಗಳು ಗರ್ಭವತಿಯಾದ ವಿಚಾರವನ್ನು ತಿಳಿದ ತವರು ಮನೆಯವರು ಮಗಳನ್ನು ಏಳನೇ ತಿಂಗಳಿನಲ್ಲಿ ತವರು ಮನೆಯವರು ಬಂದು ಕರೆದುಕೊಂಡು ಹೋಗುವರು. ನಂತರ ಹೆಣ್ಣಿನ ತವರು ಮನೆಯಲ್ಲಿ ಗರ್ಭವತಿಯಾದ ಏಳನೇ ಯಾ ಒಂಬತ್ತನೇ ತಿಂಗಳಿನಲ್ಲಿ 'ಬಯಕೆ ಮದುವೆ' ಮಾಡುವ ಕ್ರಮವಿದೆ.

ಬಯಕೆ ಮದುವೆ ಮಾಡುವ ಸಮಯಕ್ಕೆ ಮುಂಚಿತವಾಗಿ ಕದಳಿ ಬಾಳೆಹಣ್ಣು ಭತ್ತದಿಂದ ತಯಾರಿಸಿದ ಹೊದುರಿ ಮತ್ತು ಅವಲಕ್ಕಿ ಶೇಖರಿಸಿಡುವರು. ಬಯಕೆ ಮದುವೆಯನ್ನು ನಿಶ್ಚಿತ ಶುಭ ದಿನದಂದು ಮಾಡುವರು. ನಿಶ್ಚಿತ ದಿನದಂದು ಶುಭ ಗಳಿಗೆಯಲ್ಲಿ ಗರ್ಭಿಣಿ ಹೆಣ್ಣಿಗೆ ತವರಿನವರು ಒಂದು ಹೊಸ ಸೀರೆಯನ್ನು ಉಡಿಸುವರು.

ಗರ್ಭಿಣಿಗೆ 7 ತಿಂಗಳಾದರೆ ಏಳು ತರಹದ ಹೂಗಳನ್ನು 9 ತಿಂಗಳಾದರೆ ಒಂಬತ್ತು ತರಹದ ಹೂವುಗಳನ್ನು ಮುಡಿಗೆ ಮುಡಿಸುವರು. ಮತ್ತು ಎಷ್ಟು ತಿಂಗಳಾಗಿದೆಯೋ ಅಷ್ಟೇ ತರಹದ ಪದಾರ್ಥಗಳನ್ನು ಮಾಡುವರು.

ನಂತರ ಗರ್ಭಿಣಿಯನ್ನು ಮತ್ತು ಅವಳ ಪತಿಯನ್ನು ಜೊತೆಯಾಗಿ ಎರಡು ಮಣೆಗಳ ಮೇಲೆ ಕುಳ್ಳಿರಿಸುವರು. ದೀವಿಗೆಯನ್ನೂ ಹತ್ತಿಸಿಡುವರು. ಮೊದಲು ಹೊದುರಿ ಮತ್ತು ಅವಲಕ್ಕಿಯನ್ನು ಗರ್ಭಿಣಿಗೆ ಮತ್ತು ಅವಳ ಪತಿಗೆ ಮೂರು ಮೂರು ಸಲ ಗರ್ಭಿಣಿಯ ತಾಯಿ [ಮುತ್ತೈದೆಯಾಗಿದ್ದರೆ ಇಲ್ಲದಿದ್ದರೆ ಚಿಕ್ಕ ತಾಯಿ] ಬಡಿಸುವರು. ಹೀಗೆ ಬಡಿಸುವಾಗ ಇಬ್ಬರು ಎಲೆಯನ್ನು ಮುಟ್ಟಿ ನಮಸ್ಕರಿಸುವರು. ಬಾಳೆಹಣ್ಣುಗಳನ್ನು ತಿಂಗಳಿಗನುಸಾರವಾಗಿ ಬಡಿಸುವರು. ಅವರ ಪಕ್ಕದಲ್ಲಿ [7 ಯಾ 9 ತಿಂಗಳಿನಂತೆ] ಜನರು ಕುಳಿತುಕೊಳ್ಳುವರು. ಇವರಿಗೆಲ್ಲ ಬಡಿಸಿದ ನಂತರ ಸೇರಿದ ನೆಂಟರಿಷ್ಟರಿಗೆ ಬಡಿಸುವರು. ಅಲ್ಲದೆ

[ಹಿಂದಿನ ಪುಟದಿಂದ]

**ವಿಜೇತರು :**

6 ವರ್ಷದ ಕೆಳಗಿನ ಮಕ್ಕಳು ಕಾಳುಹೆಕ್ಕುವ ಸ್ಪರ್ಧೆಯಲ್ಲಿ ಕುದುಪಜೆ ರಾಜನ್ ಹೊನ್ನಪ್ಪ ಮತ್ತು ಮುಕ್ಕಾಟಿ ಪ್ರೀತಮ್ ಯೋಗಾಸನದಲ್ಲಿ ಏಕೈಕ ಅಭ್ಯರ್ಥಿ ಕೆಮ್ಮಾರನ ನವೀನ್ ವಿಶೇಷ ಬಹುಮಾನ ಪಡೆದರು.

**ಸಂಗೀತ :** ಪೆರುಬಾಯಿ ಪುಷ್ಪ, ಸೂದನ ರತ್ನಾವತಿ, ಬೈಮನ ಬೋಜಮ್ಮ, ಕುದುಪಜೆ ಶಾರದಾ ಬಸಪ್ಪ, ಪೆರುಬಾಯಿ ರೇಖಾ, ಕಾನೆಹಿತ್ಲು ಚೇತನ್.

**ಸಾಂಸ್ಕೃತಿಕ ಕಾರ್ಯಕ್ರಮ ವಿಜೇತರು :** ಕೊಂಪುಳಿ ಮಿಥುನ್ ತಂಡ, ಕೆಮ್ಮಾರನ ಮಮತ ತಂಡ, ಗುಡ್ಡನ ಸಂತೋಷ್ ತಂಡ, ಕೆಮ್ಮಾರನ ಮಾನಸ ಮತ್ತು ನವೀನ್, ಕೊಡಗನ ಶ್ರೀಗೌರಿ, ಶ್ರೀನಿಧಿ, ಕೋಲಾಟ ಶಿರಗಜೆ ಸೌಜನ್ಯ ಸಂಗಡಿಗರು.

**ಆಟೋಟ :** ದಬ್ಬಡ್ಕ ಆಶಿತ್, ಕೆಮ್ಮಾರನ ಮಾನಸ, ತೆಕ್ಕಡೆ ಬಿಂದು, ಕೊಡಗನ ಶ್ರೀಗೌರಿ, ಶಿರಕಜೆ ಪುಷ್ಪ, ದಂಡಿನ ಪ್ರೀತ, ಕಲ್ಲುಮುಟ್ಲು ಹರಿಣಿ, ಪೆರುಬಾಯಿ ಪುಷ್ಪ.

**ಕೊಡಗಿನ ಕುಣಿತ :** ಪೊನ್ನಚ್ಚನ ಮೋಹನ್, ಕೊಂಪುಳಿ ನಾಗರಾಜು, ಬೈಮನ ವಿಶ್ವನಾಥ ತಂಡ, ಮಹಿಳೆ : ಕೋಳಿಬೈಲು ಯಶೋಧ, ಕುದುಪಜೆ ಲತಾ ಸುರೇಶ್, ಮತ್ತು ಮರದಾಳು ಬೇಬಿ ತಂಡದವರು.

ಕಾರ್ಯಕ್ರಮದ ತೀರ್ಪುಗಾರರಾಗಿ ಆಯ್ಯಂಡ್ರ ಭೀಮಯ್ಯ, ಕುದುಪಜೆ ಶಾಂತಿ ಭೋಜಪ್ಪ, ಪೆರುಬಾಯಿ ಚಿಣ್ಣಪ್ಪನವರು ನಡೆಸಿಕೊಟ್ಟರು.

ಕಾರ್ಯಕ್ರಮದಲ್ಲಿ ಕೊಡಗು ಸಂಗಾತಿ ಗೌ. ಸಂಪಾದಕ ಶ್ರೀ ಪಟ್ಟಡ ಪ್ರಭಾಕರ್ ಮತ್ತು ಸ್ಥಳೀಯ ಪತ್ರಕರ್ತ ಶ್ರೀ ಕುದುಪಜೆ ಬಸಪ್ಪನವರು ಸಭೆಯಲ್ಲಿ ಉಪಸ್ಥಿತರಿದ್ದರು.

ಸಂಘದ ಕಾರ್ಯದರ್ಶಿ ಶ್ರೀ ಕೊಡಗನ ರಮೇಶ್‌ರವರು ಕಾರ್ಯಕ್ರಮದ ನಿರೂಪಣೆಯನ್ನು ರಸವತ್ತಾಗಿ ನಡೆಸಿಕೊಟ್ಟು ವಂದನಾರ್ಪಣೆ ಮಾಡಿದರು. ○

---

ಊಟಕ್ಕೆ ಹಲವು ತರದ ಸಸ್ಯಹಾರದ ಪದಾರ್ಥ, ಪಾಯಸ, ಪಲ್ಯಗಳನ್ನು ಮಾಡುವುದು ರೂಢಿಯಲ್ಲಿದೆ.

ಕೆಲವೆಡೆಗಳಲ್ಲಿ ಸರ್ವ ಸಾಧಾರಣವಾಗಿ ಸತ್ಯನಾರಾಯಣ ಪೂಜೆಯನ್ನು ಮಾಡುವುದು ರೂಢಿಯಲ್ಲಿದೆ.

ಕೃಪೆ : ಗೌಡಸಂಸ್ಕೃತಿ

# ನಿಮ್ಮ ಪತ್ರಗಳು

## ಪ್ರತಿಕ್ರಿಯೆ

ಮಾನ್ಯರೇ,

ನಿಮ್ಮ ಸಂಪಾದಕೀಯ ನಮ್ಮ ಯುವಕ/ಯುವತಿಯರಿಗೆ ಕರ್ತವ್ಯ ಪ್ರಜ್ಞೆಯನ್ನು ಮೂಡಿಸುತ್ತದೆ. ಸೇನೆಗಳಿಗೆ ಯುವಕರ ಸೇರ್ಪಡೆ ಕುಂಠಿತವಾಗಿದೆಯೇ. ಹೌದು, ಯುವಕರ ಸೇರ್ಪಡೆ ಕುಂಠಿತವಾಗಿಲ್ಲ, ಯುವ ಜನಾಂಗವೇ ಕುಂಠಿತವಾಗಿದೆ. ನನಗನಿಸಿದ ಕಾರಣಗಳನ್ನು ಬರೆಯಲಪೇಕ್ಷಿಸುತ್ತೇನೆ.

ಹಿಂದಿನ ಕಾಲದಲ್ಲಿ ನಮ್ಮ ಕುಟುಂಬ ಒಂದು ಐನ್‌ಗೆ ಸೀಮಿತವಾಗಿತ್ತು. ಒಬ್ಬ ಹಿರಿಯರ ಅಧಿಕಾರದಲ್ಲಿತ್ತು. ತೋಟ, ಗದ್ದೆಗಳು ಒಂದು ಸಂಸಾರದ ಅಧೀನದಲ್ಲಿತ್ತು. ಆಗ ಸಂಸಾರದಲ್ಲಿ ಕೆಲವರು ಗದ್ದೆ, ತೋಟ ನೋಡಿಕೊಳ್ಳುತ್ತಿದ್ದರು. ಸೇನೆಗೆ ಸೇರಿ ತಮ್ಮ ಉಳಿತಾಯವನ್ನು ತಮ್ಮ ಮನೆಗೆ ಕಳುಹಿಸಿಕೊಡುತ್ತಿದ್ದರು. ಸಂಸಾರ ಸುಗಮವಾಗುವುದಕ್ಕೆ ಕಾರಣವಾಯಿತು. ಇಂದು ಒಗ್ಗಟ್ಟು, ಪ್ರೀತಿ, ವಾತ್ಸಲ್ಯ, ದೇಶಭಕ್ತಿ, ದೈವಭಕ್ತಿ ದೂರವಾಗಿದೆ. ನಾಗರೀಕತೆ ನಗರೀಕತೆಯಾಗುತ್ತಿದೆ. ಶುದ್ಧ ಗಾಳಿಯಲ್ಲಿ, ಮೈದಾನದಲ್ಲಿ ಆಡುವ ಆಟ ಇಂದು 4 ಗೋಡೆಗಳೊಳಗೆ ಕಂಪ್ಯೂಟರ್ ಆಟಗಳಾಗಿವೆ. ಕೂಡು ಸಂಸಾರವೆಲ್ಲ ಪಾಲಾಗಿ ಹಾಳಾಗಿದೆ. ಎಲ್ಲರೂ ಒಡೆಯರಾಗುತ್ತಾರೆ. ಹಿಂದು ಮುಂದಿನ ಅರಿವಿಲ್ಲ, ದೇಹದಲ್ಲಿ ಶಕ್ತಿಯಿಲ್ಲ, ಸರಿಯಾದ ವ್ಯಾಯಾಮವಿಲ್ಲ, ಪೌಷ್ಠಿಕ ಆಹಾರವಿಲ್ಲ, ಊಟ ಮಾಡದ ಸಮಯದಲ್ಲಿ ಊಟ ಮಾಡುವುದು. ನಿದ್ರೆ ಬಾರದ ಸಮಯದಲ್ಲಿ ನಿದ್ರೆ ಮಾಡುವುದು. ಸಮಯದ ಅರಿವಿಲ್ಲದಿರುವುದು. ಬೀಡಿ, ಸಿಗರೇಟು, ಗುಟ್ಕ, ಸಾರಾಯಿಗಳನ್ನು ಅತಿಯಾಗಿ ಪ್ರೀತಿಸುವುದು. ಇವೆಲ್ಲ ನಮ್ಮಲ್ಲಿರುವ ಜನಾಂಗವನ್ನು ಹಾಳು ಮಾಡುತ್ತದೆ. ಅದಕ್ಕೆ ಇಂದು ಟಿ. ವಿ. ಕುಮ್ಮಕ್ಕು ನೀಡುತ್ತದೆ. ಕಾಮ ಭೋಗಗಳನ್ನು ವಿಜೃಂಭೀಕರಿಸುತ್ತಾನೆ.

ಮೊದ ಮೊದಲು ನಮ್ಮ ಯುವಕರಲ್ಲಿ ಶಿಸ್ತು ಇಲ್ಲದಾಗಿದೆ. ದುಡಿಮೆ ಕಡಿಮೆ. ನಾವು ಅಲ್ಪಸಂಖ್ಯಾತರಾದರೂ ಅಲ್ಪ ಸಂಖ್ಯಾತರ ಸವಲತ್ತೇ ಸಿಕ್ಕುತ್ತಿಲ್ಲ. ನಾವು ಹಣವಂತರವರಂತೆ ಜೀವನ ನಡೆಸುತ್ತ ನಮ್ಮನ್ನು ನಾವೇ ಹಾಳುಮಾಡಿಕೊಳ್ಳುತ್ತೇವೆ. ಇದು ನನಗೆ ದುಃಖವನ್ನು ಕೊಡುತ್ತದೆ.

ನಮ್ಮ ಯುವಕ ಯುವತಿಯರು ಕಡಿಮೆ ಪಕ್ಷ ಹತ್ತು ವರ್ಷವಾದರೂ ಸೇನೆಯಲ್ಲಿ ಸೇವೆ ಮಾಡಲೇಬೇಕು. ಇದರಿಂದ ಶಿಸ್ತು, ಸಂಸಾರದ ಹಣದ ಕೊರತೆ, ಆಸ್ತಿಯ ಉತ್ಪನ್ನ ಹೆಚ್ಚುತ್ತದೆ. ನಮ್ಮ ಕನ್ನಡ ಭಾಷೆ ಇದಕ್ಕೆ ಸಹಕಾರಿಯಲ್ಲ. ಕನ್ನಡ ಕಲಿತರೆ ನಮಗೆ ಮೀಸಲಾತಿಯಿಂದ ಕರ್ನಾಟಕದಲ್ಲಿ ಹುದ್ದೆಗಳು ಸಿಗುವುದಿಲ್ಲ. ಆದ್ದರಿಂದ ಇಂಗ್ಲಿಷ್ ಕಡ್ಡಾಯವಾಗಿ ಕಲಿಯಲೇಬೇಕು. ಇಂಗ್ಲಿಷ್ ಗೊತ್ತಿದ್ದರೆ ತಮ್ಮ ತಮ್ಮ ಬುದ್ಧಿಶಕ್ತಿಯಿಂದ ದೇಶ ವಿದೇಶಗಳಲ್ಲಿ ದುಡಿದು ಹಣ ಗಳಿಸಬಹುದು. ಇಲ್ಲದಿದ್ದರೆ ಕರ್ನಾಟಕದಲ್ಲಿ ನೌಕರಿಯಿಲ್ಲದೆ ಕೊಳೆಯಬೇಕಾಗುತ್ತದೆ.

ತಂದೆ ತಾಯಿಯಂದಿರು ಅದರಲ್ಲೂ ತಾಯಂದಿರು ತಮ್ಮ ಮಕ್ಕಳಲ್ಲಿ ಶಿಸ್ತು, ಸಂಯಮ, ಪ್ರೀತಿ ಪ್ರೇಮ ಬೆಳೆಸಿ ಅವರನ್ನು ತಿದ್ದಿ ದೇಶ ಸೇವೆಗಾಗಿ ಸಮಾಜ ಸೇವೆಗಾಗಿ ತಮ್ಮ ಮಕ್ಕಳನ್ನು ತಯಾರು ಮಾಡಬೇಕು. ಇಲ್ಲದಿದ್ದರೆ ತಾಯಂದಿರೇ ಮಕ್ಕಳನ್ನು ಹಾಳು ಮಾಡಿದ ಹಾಗೆ ಆಗುತ್ತದೆ.

ನಮ್ಮ ಯುವ ಪೀಳಿಗೆಯಲ್ಲಿ ಶಿಸ್ತು ಮೂಡಬೇಕು. ದೇಶ ಪ್ರೇಮ ಉಕ್ಕಬೇಕು. ಸೈನ್ಯಕ್ಕೆ, ಐ.ಎ.ಎಸ್., ಐ.ಪಿ.ಎಸ್.ನಲ್ಲಿ ತಮ್ಮನ್ನು ತೊಡಗಿಸಿಕೊಳ್ಳಬೇಕು. ಮಕ್ಕಳಿಗಾಗಿ ವಿಶೇಷ ಹಣ, ಆಸ್ತಿ ಮಾಡಿಡುವುದು ಮಕ್ಕಳನ್ನು ಸೋಮಾರಿಗಳಾಗಿ ಮಾಡುತ್ತದೆ. ದುಡಿದು ತಿನ್ನುವ ಧೃಡ ಸಂಕಲ್ಪ ಬೇಕು.

ಎರಡನೇ ಮಹಾಯುದ್ಧ ಕಾಲದಲ್ಲಿ ಅಂದಿನ ಸಹಾಯಕ ಕಮಿಷನರ್ ಮಾನ್ಯ ದಿ. ಕೋಡಿರ ಟಿ. ಉತ್ತಪ್ಪನವರಂತ ಪ್ರಚೋದನಕಾರರು ಇಂದಿಲ್ಲ. ಅವರು ತಮ್ಮ ಅಧಿಕಾರಾವಧಿಯಲ್ಲಿ ಕೊಡಗಿನ ಯುವಕರನ್ನು ಸೈನಿಕ ಸೇವೆಗೆ ಸೇರಿಸಿ ನಮ್ಮ ಸಂಸಾರವನ್ನು ನಮ್ಮ ಆಸ್ತಿ ಪಾಸ್ತಿಗಳನ್ನು ಉತ್ತಮ ಪಡಿಸಿದ ಕಾರ್ಯವನ್ನು ಇಂದು ಎಲ್ಲರೂ ಮರೆತಿದ್ದಾರೆ. ಒಂದು ಕಾಲದಲ್ಲಿ ಹೆಚ್ಚಾಗಿ ಸೇನಾ ಅಧಿಕಾರಿಗಳು ಕೊಡಗಿನವರಾಗಿದ್ದು ಇಂದು ಅವರಿಗೆ ಅರ್ಹತೆಯಿದೆ. ಅವಕಾಶವಿಲ್ಲ. ಸೇನೆಯಲ್ಲಿ ರಾಜಕೀಯ ತುಂಬಿದೆ. ನಮ್ಮ ಯುವಕ ಯುವತಿಯರು ಸೇನೆಯಲ್ಲಿ ಕಡಿಮೆಯಾಗಿದ್ದಾರೆ.

—ಚೇಂದ್ರಿಮಾಡ ಗ. ಮುತ್ತಪ್ಪ, ಕುಶಾಲನಗರ

---

## ತಿದ್ದುಪಡಿ

ಕೊಡಗು ಸಂಗಾತಿ ಸಂಚಿಕೆ 4ರಲ್ಲಿ 'ಕೊಡಗು ಗೌಡ ಸಮಾಜದ ಮಹಾಸಭೆ ಮತ್ತು ಅಭಿನಂದನಾ ಸಮಾರಂಭ'ದ ಲೇಖನದಲ್ಲಿ ದಿನಾಂಕ 24-1-99 ರಂದು ನಡೆದ ಸನ್ಮಾನ ಸಮಾರಂಭದಲ್ಲಿ ನಿವೃತ್ತ ಕರ್ನಲ್ ಕುಯ್ಯಮುಡಿ ಪ್ರಭಾಕರ ಇವರ ಹೆಸರು ಬಿಟ್ಟುಹೋಗಿದೆ. ಆದ್ದರಿಂದ ಓದುಗರು ಇವರಿಗೂ ಸನ್ಮಾನಿಸಲಾಗಿದೆ ಎಂದು ಓದಿಕೊಳ್ಳಬೇಕಾಗಿ ವಿನಂತಿ.

—ಸಂಪಾದಕಿ

## ಧಾರಾವಾಹಿ-22

ಮೂಲಕಥೆ : ಅಶ್ವಥಿ ಅರವಿಂದ್
ಅರೆಭಾಷೆಗೆ : ಎಂ.ಇ. ಮಹಮ್ಮದ್

# ಕರಿ ಚಿನ್ನ

'ಆದರೂ ಹಿಂಗೆ ಕಣ್ಣ್‌ಲಿ ರಕ್ತ ಇಲ್ಲದಂತ ಮಾತ್ ನಿಮ್ಮ ಬಾಯಿಂದ ಬಂದದೇಂತ ನಾನ್ ಗ್ಯಾನ ಮಾಡಿತ್ಲೆ. ರಂಜನ್ ನಂಗೂ ಮಜನಂಗೇ. ನಾನ್ ನನ್ನ ಮಗಳ್ನ ಪ್ರೀತಿಸ್ದಂಗೇ ಅವನ ಸ ಪ್ರೀತಿಲಿ ನೋಡ್ತಾ ಇದ್ದಂವ. ಈಗ ಅವನ ಹೆಣನ ನೋಡಿಕೆ ಬತ್ತ್ತೇಂತ ಹೇಳುವ ನಿಮ್ಮ ಮಾತ್‌ನ ದೇವ್ರು ಕೂಡ ಮೆಚ್ಚ್ಲೆ.'

ಬಹಳ ದುಃಖಂದ ಹೇಳ್ದ ನಾಡ್‌ಕೊಲ್ಲಿ ಮಾದಪ್ಪ ಅಲ್ಲಿಂದ ಹೊರ್‌ಟತ್.

'ಪಪ್ಪಾ, ನಂಗೆ ಇನ್ನ್ ಯಾರ್ ಕೂಡ ಇಲ್ಲೆಲ್ಲ ಪಪ್ಪಾ...ಮೀರಾ ನನ್ನ ರಂಜನ್ ಹೋಗಿ ಬುಡ್ತಲ್ಲವ್ವಾ'

ಗೌರ ಮರ್‍ಗ್ಟಕಂಡ್ ಹಿಂದೆ ಹೋತ್.

'ನನ್ನ ಮಜನ ಯಾರಾದ್ರು ಒಮ್ಮೆ ನಂಗೆ ತೋರ್ಸಿಯಪ್ಪಾ, ನೀವ್ ಯಾರಾದ್ರು ಒಮ್ಮೆ ನನ್ನ ಅಲ್ಲಿಗೆ ಕರ್ಕಂಡ್ ಹೋಗಿಪ್ಪಾ...!

ಮುತ್ತಕ್ಕಿದ್ ಮರ್ಗ್ಡಟ ಕೇಳ್‌ದವ್ಕೆ ಕರ್‌ಳ್ ಚುರ್‍ಕ ಎನ್ಸಿತ್.

ಮುತ್ತಕ್ಕನ ಸಮಾಧಾನ ಮಾಡಿಕೆ ಅಲ್ಲಿ ಯಾರ್ ಕೂಡ ಇತ್ತ್‌ಲೆ.

'ಬರೀ ಪಿಶಾಚಿ, ಅಂವ ದುಷ್ಟ'

ಮೀರ ತನ್ನ ಪಪ್ಪನೊಟ್ಟಿಗೆ ಹೇಳ್ತ್.

ಮನೆಗೆ ಬಂದ್ ಬೇರೆ ಬಟ್ಟೆ ಹಾಕ್ಕಂಡ್ ಮಾದಪ್ಪ ಗಾಳಿಮರ ಸೋಮಯ್ಯನ ಮನೆಗೆ ನಡ್ತ್.

'ನಾನ್‌ಸಾ ಬರ್ಲಾ ಪಪ್ಪಾ ?'

ಮೀರ ಕೇಳ್ತ್.

'ಬೇಡ ಮಗಳೆ, ನೀನ್ ಬಾದು ಬೇಡ. ಮನ್ಸ್ ಗಟ್ಟಿ ಇಲ್ಲದವು ರಕ್ತ ಕಂಡ್ರೆ ತಲೆ ತಿರ್‍ಗಿ ಬಿದ್ದ್‌ಬುಟ್ಟವೆ.

'ಅಲ್ಲಿ ಗೌರಕ್ಕ ಮರ್ಗೊ ಸದ್ದ್ ಕೇಳಿ ಕಂಡ್ ನಾನ್ ಇಲ್ಲೇ ಇರೋಕಾ ?

'ಅದೆಲ್ಲ ನಮ್ಮ ಯೋಗ ಕೂಸೂ, ಏನ್ ಮಾಡಿಕೆ ಆದೆ ಹೇಳ್'

ಅಷ್ಟ್ ಹೇಳಿ ಮಾದಪ್ಪ ಚುರ್‌ಕ್‌ಲಿ ನಡ್ತ್.

ಗಾಳಿಮರ ಸೋಮಯ್ಯನ ಮನೆ ಅಂಗಳಲಿ ಸಾಸಿವೆ ಚೆಲ್ಲಿಕೆ ಜಾಗ ಇಲ್ಲೆ. ಅಷ್ಟೊಂದ್ ಜನಗ ಅಲ್ಲಿ ಸೇರಿದ್ದೊ.

ಮಾದಪ್ಪನ ಕುಡ್ ಜನಗ ದಾರಿ ಬುಟ್ಟೊ. ತನ್ನ ಅಳಿಯುನ ಸಾವ್‌ನ ಒಮ್ಮೆ ನೋಡಿಬುಟ್ಟ್ ಮಾದಪ್ಪ ಕಣ್ಣ್ ಒರ್ಸಿಕಂಡ್ ಹೊರಗೆ ಬಾತ್.

ಸುಸ್ತಾಗಿದ್ದ ಅಂವ ಅಂಗಳ ಮೂಲೆಲಿದ್ದ ಒಂದ್ ಮರದ ನೆರಳ್ಲಿ ಹೋಗಿ ಕುದ್ದತ್.

ಅಷ್ಟರ್ಲಿ ಜನಗಳ್ನ ದೂಡಿಕಂಡೇ ಪೊಲೀಸ್‌ಗ ಒಳಗೆ ಬಂದೊ. ಸರ್ಕಲ್ ಇನ್ಸ್‌ಪೆಕ್ಟರ್ ಪ್ರಭುದಾಸ್, ಸಬ್‌ಇನ್ಸ್‌ಪೆಕ್ಟರ್ ರಾಮಮೂರ್ತಿ, ಹೆಡ್‌ಕಾನ್‌ಸ್ಟೇಬಲ್ ರಾಘವ, ಮತ್ತೆ ಬೇರೆ ಇಬ್ಬರ್ ಪೊಲೀಸ್ ಜೊತೆಲಿ ಬೋರ್‌ಗುಡ್ಡೆ ದೇವಯ್ಯನ ಮ್ಯಾನೇಜರ್ ಲಕ್ಷ್ಮಣ ಕೂಡ ಇತ್ತ್. ದೇವಯ್ಯನ ಟೆಕ್ಸ್‌ಟೈಲ್ಸ್ ಮ್ಯಾನೇಜರ್ ಬಿದ್ದಪ್ಪ, ಎಸ್ಟೇಟ್ ಮ್ಯಾನೇಜರ್ ವರ್ಗೀಸ್, ಟೂರಿಸ್ಟ್ ಹೋಂನ ಡೈರೆಕ್ಟರ್ ಕಿರಣ್ ಮಾಚಯ್ಯ ಎಲ್ಲವೂ ಬಂದ್ ತಲಪಿದೊ.

ಕೊಲೆ ಆಗಿರೊ ವ್ಯಕ್ತಿ ಸಾಮಾನ್ಯನೇನೂ ಅಲ್ಲ. ಬೋರ್‌ಗುಡ್ಡೆಯ ಕಿರೀಟ ಇಲ್ಲದ ರಾಜನ ಹಿರಿ ಮಜ.

ದೇವಯ್ಯ ಮತ್ತೆ ಸೊಲ್ಪ ವಿಸ್ಕಿ ಹಾಕಿತ್. ಅಂವ ತನ್ನ ಮಜನ ವಿಷ್ಯ ಜನಗಳ ಹತ್ರ ಹೇಳಿ ಮರ್‍ಗ್ಟದೆತ ಜನ ತಿಳ್‌ಕಂಡಿದ್ದೊ. ಅದ್ರೆ ಅದೊಂದೂ ನಡ್‌ತ್ಲೆ.

ಕಿರಣ್ ಮಾಚಯ್ಯನೂ, ಲಕ್ಷ್ಮಣನೂ ಸೇರಿಕಂಡ್ ಎಲ್ಲ ಕ್ರಿಯೆ ಮಾಡಿ ಮುಗ್ಸಿದೊ.

ಆ ಹಣವಂತನ ಮಜನ 'ಇನ್‌ಕ್ವೆಸ್ಟ್' ತಯಾರ್ ಮಾಡಿಕೆ ಪೊಲೀಸ್‌ಗೆ ತುಂಬ ಹೊತ್ತ್ ಬೇಕಾಗಿ ಬಾತ್ಲೆ. ಸ್ಪಾಟ್ ಇನ್‌ಕ್ವೆಸ್ಟ್ ಆದಂಗೆ ಪೊಲೀಸ್‌ಗ ಸೋಮಯ್ಯನ ಮಗಳ್ನ ವಿಚಾರಣೆ ಮಾಡಿಕೆ ಆಸ್ಪತ್ರೆಗೆ ಹೋದೊ.

ಸಾಯಂಕಾಲ ಐದ್ ಗಂಟೆಗೆ ಪೋಸ್ಟ್‌ಮಾರ್ಟಂ ಮಾಡ್ದ ಹೆಣ ಸಿಕ್ತ್. ಎಲ್ಲ ಸೇರ್ಕಂಡ್ ಸಾವ್‌ನ ಮನೆಗೆ ತಂದೊ. ಅಷ್ಟರ್ಲಿ ಜೀವನ್ ಬಂದ್ ತಲಪಿತ್.

---

ಕಳೆದ ಸಂಚಿಕೆಲಿ ..........

ಕೊಟ್ಟೂರ್‌ಲಿ ಮದುವೆಗೆ ಹೋಗಿ ಗಾಳಿಮರ ಸೋಮಯ್ಯ ಬಾರಾಕನ ಮನೆಲಿ ರಂಜನ್‌ನ ಕೊಲೆಯಾಗುಟ್ಟ್. ಯಾರ್ ಮಾಡ್ದ್ದಂತ ಯಾರಿಗೂ ಗೊತ್ಲೆ. ಅಕ್ಕ ಪಕ್ಕದವೆಲ್ಲ ಸೇರಿ ಪೊಲೀಸ್‌ಗೆ ತಿಳ್ಸಿದೊ. ಬೋರ್‌ಗುಡ್ಡೆಗೆ ಸನ ವಿಷಯ ತಿಳ್ದ್ ಎಲ್ಲಾ ಜನ ಸೋಮಯ್ಯನ ಮನೆಕಡೆ ಬಂದೊ. ನಾಡ್‌ಕೊಲ್ಲಿ ಮಾದಪ್ಪ ದೇವಯ್ಯನ ಮನೆಲಿ ಮರ್ಗೊ ಸದ್ದ್ ಕೇಳಿ ಹೋಕಾಕನ ದೇವಯ್ಯ ಬೈದ್ ಕಳ್ಸಿದೆ.

ಮುಂದೆ ಓದಿ...........

ಅಂವ ಅಣ್ಣನ ಸಾವ್‌ನ ಮೇಲೆ ಕಂಪನೆ ಬಿದ್ದ್‌ಕಂಡ್ ಮರ್‍ಡಿಕೆ ಸುರ್ ಮಾಡ್ತ್.

ಸಾವ್‌ನ ಮನೆ ಒಳಗೆ ತಂದ್ ಇಸ್ ಕಾಕನ ಮುತ್ತ್ರಕ್ಕ್ಕಿ ಎದೆ ಬಡ್‌ಕಂಡ್ ಮರ್‍ಡಿಕೆ ಸುರ್ ಮಾಡ್ತ್. ಜೀವನ್ ತನ್ನ ಮಮ್ಮಿನ ಹಿಡ್ದ್ ಸಮಾಧಾನ ಮಾಡಿಕೆ ಪೇಚಾಡ್ತ್.

ಗೌರ ಸದ್ದಿಲ್ಲದೆ ಮರ್‍ಡ್ತಾ ರಂಜನ್‌ನ ಕಾಲ್ ಹತ್ರ ಕಣ್ಣೊರ್‍ಸಿಕಂಡ್ ಕುದ್ದಿತ್ತ್.

ರಂಜನ್‌ನ ದುಷ್ಟತನವೊಂದೂ ಅವಳಿಗೆ ಆಗ ಗ್ಯಾನ ಬಾತ್ಲೆ. ಬದ್ಲಿಗೆ ಅವನ ಪ್ರೀತಿ ಮಾತ್ರ ಗ್ಯಾನ ಬಾತ್. ಅವ್ಳು ಆಗಾಗ ಬಿಕ್ಕಿಬಿಕ್ಕಿ ಮರ್‍ಡ್ತಿತ್ತ್.

'ಸಾಕ್‌ನೆ ನಿನ್ನ ಮೊಸಳೆಕಣ್ಣೀರ್.'

ಬೋರ್‌ಗುಡ್ಡೆ ದೇವಯ್ಯ ತುಂಬಿದ್ದ ಜನಗಳ್ನ ಕೂಡ ಕೇರ್ ಮಾಡದೆ ಹೇಳ್ತ್.

ಗೌರ ಎದ್ದ್ ಒಳಗೆ ಹೋತ್.

ದೇವಯ್ಯನ ಕೆಲಸದವೆಲ್ಲ ಒಂದೊಂದ್ ಹೂಹಾರ ಹಿಡ್‌ಕಂಡ್ ಬಂದೊ. ಅವು ಅದರ್‍ನ ರಂಜನ್ ಸಾವ್‌ನ ಮೇಲೆ ಹಾಕಿ ತಮ್ಮ ದುಃಖ ತೋರ್‍ಸಿದೊ.

ಹಾಡ್ ಹಗಲ್ ಹೊತ್ತ್ ಒಂದ್ ಪಾಪದ ಗೂಡೆನ ಕೆಡ್ಸಿಕೆ ಹೋಗಿ ಸತ್ತ ದ್ರೋಹಿಗೆ 'ಸಿಕ್ತಾ ಇರೋ ಮರ್ಯಾದಿ !

ಅವನ ಹೆಣ ನೋಡಿಕೆ ಬಂದ ಜನರ ಕ್ಯೂ ಫರ್ಲಾಂಗ್ ದೂರ ತಲಪಿತ್ತ್.

ರಾತ್ರಿ ಹತ್ತ್‌ಗಂಟೆ ಹೊತ್ತ್‌ಗೆ ಸಾವ್ ಸುಡ್ಕ್ಕಳಿಗೆ ತಲಪಿತ್. ಅಷ್ಟರ್‍ಲಿ ಕೈಲಿ ಹೂ ಹಿಡ್‌ಕಂಡ್ ಮೀರ ಅಲ್ಲಿಗೆ ಓಡಿ ಬಾತ್.

ಅವ್ಳು ಕಣ್ಣೀರ್ ಹಾಕ್ತಾ ರಂಜನ್‌ನ ಸಾವ್‌ನ ಮೇಲೆ ಹೂಹಾರನ ಹಾಕಿತ್. ಕ್ರಿಯೆ ಎಲ್ಲ ಮುಗ್ದ್ ಜನಗ ಸುಡ್ಕ್ಕಳಿಂದ ಹೋದರೂ ಮೀರಾ ಮಾತ್ರ ಅಲ್ಲಿಯೇ ನಿತ್ತ್‌ಕಂಡಿತ್ತ್.

'ಮೀ...ರಾ'

ಜೀವನ್ ಅವಳ ಹತ್ರ ಹೋಗಿ ಕರ್‍ತ್.

'ಹ್ಞೂಂ ?'

ಅವ್ಳು ತಲೆಎತ್ತಿ ಜೀವನ್‌ನ ನೋಡ್ತ್.

ಐ ಯಾಮ್ ಸಾರಿ ಮೀರಾ. ನನ್ನ ಡ್ಯಾಡಿ ಮಾಡ್ದ ತಪ್ಪಿಗೆ ನಾನ್ ನಿನ್ನಕ್ಕಲೆ ಕ್ಷಮೆ ಕೇಳ್ನೆ. ಡ್ಯಾಡಿ ನಿನ್ನ ಮತ್ತೆ ಮಾವನ ಬೈದ್ ಆಚೆಗೆ ಕಳ್ಸಿದ ವಿಷ್ಯ ತಿಳ್ದ್ ನಂಗೆ ತುಂಬ ಬೇಜಾರ ಆತ್. ಏನ್ ಮಾಡ್ದು ಹೇಳ್. ಡ್ಯಾಡಿ ಒಳ್ಳೆದ್ ಕೆಟ್ಟದ್‌ನ ಮರ್‍ತ್ ಪಿಶಾಚಿನಂಗೆ ಆಡ್ದೆ. ಅದರ ಫಲ ಇಂದ್ ಮಕ್ಕ ಅನುಭವಿಸು ವಂಗೆ ಆವುಟು.'

'ಅವರ ಬಂಗ್ಲೆಗೆ ಬಾಕೆ ಬೊತ್ತ್‌ತ. ಬೇಕರೆ ಅವು ಹೇಳಲಿ,ಇಲ್ಲಿಗೆ ಈ ಸುಡ್ಕ್ಕಳಿಗೆ ಬರವುನ ತಡಿಯುಕೆ ನಿನ್ನ ಅಪ್ಪಂಗೆ ಅಧಿ ಕಾರ ಇಲ್ಲೆಲಾ. ರಂಜನ್ ಸತ್ತ್ ಹೋತ್‌ೕಂತ ದೊಡ್ಡ ದುಃಖ ಏನೂ ನಂಗೆ ಇಲ್ಲೆ. ಆದರೆ ಆ ಮನ್ಸ ನನ್ನ ಗೌರಕ್ಕನ ಗಂಡ ಆಗಿತ್ತಲ್ಲಾಂತ ಒಂದೇ ಕೊರಗ್. ಅಣ್ಣ ತಮ್ಮ ಇಲ್ಲದ ನಂಗೆ ಒಬ್ಬ ಅಣ್ಣನ ಸ್ಥಾನಲಿ ನಿಲ್ಲಕಾದಂವ ಅಕ್ಕನ ಗಂಡ, ರಂಜನ್ ಸತ್ತ್‌ಹೋತ್‌ೕಂತ ಅಲ್ಲ ನನ್ನ ಅಕ್ಕಂಗೆ ಗಂಡ ಇಲ್ಲದೆ ಆತಲ್ಲಾಂತ ನಂಗೆ ಬೇಜರ '

ಅಷ್ಟ್ ಹೇಳ್ದ ಮೀರ ತನ್ನ ಕಣ್ಣ್ ಒರ್‍ಸಿ ಕಂಡತ್. ಅಲ್ಲಿಂದ ಅವ್ಳು ತನ್ನ ಮಮ್ಮಿನ ಗೋರಿ ಹತ್ರ ಹೋತ್. ಅಲ್ಲಿ ಗೋರಿನ ಮುಟ್ಟಿ ನಮಸ್ಕಾರ ಮಾಡಿ ಬುಟ್ಟ್ ನಡ್ತ್.

ಜೀವನ್ ಅವಳ ಹಿಂದೇ ನಡ್ತ್.

ಮೀರ ಪಾಪದ ಗೂಡೇತ ಜೀವನ್‌ಗೆ ಗೊತ್ತುಟ್ಟ್.

'ಮೀರಾ'

ಸುಡ್ಕ್ಕಳಿದ್ ಗೇಟ್ ದಾಟಿದಂಗೆ ಜೀವನ್ ಮೀರಂಗೆ ಕೇಳುವಂಗೆ ಕರ್‍ತ್.

'ನಾಡ್‌ಕೊಲ್ಲಿ ಮನೆಯವ್ರ ಮೇಲೆ ನಂಗೆ ಯಾವ ಸಿಟ್ಟೂ ಇಲ್ಲೆವ್ವ'

'ಅದ್ಕೆ ನಾನೀಗ ಏನೂ ಹೇಳ್‌ತ್‌ಲೆಲ್ಲ ಜೀವನ್.'

ನಾನ್ ಸೊಲ್ಪ ಅರ್ಜೆಂಟ್ ಕೆಲ್ಸಲಿ ಮುಳುಗಿ ಹೋಗಿದ್ದೆ ಮೀರ. ರಂಜನ್‌ದ್ ವಿಷಯುಲಿ ನಂಗೆ ಒಬ್ಬ ಲಾಯರ್‌ನ ಕಾಂಬಕೆ ಇತ್ತ್. ಆ ಗಾಳಿಮುರ ಸೋಮಯ್ಯನೋ, ಮಗಳ್ನೊ ಪೊಲೀಸ್ ಕಸ್ಟಡಿಗೆ ತಕಣದೇ ಇರ್‍ಕಲೆ. ಚಂಗುಮಣಿ ಜಾಮೀನ್‌ಲಿ ಬುಡ್‌ಗಡೆ ಆಗುಟ್ಟ್‌ಗಡ. ಆಸ್ಪತ್ರೆಲಿ ನೀಲುನ ಎನ್‌ಕ್ವಯಿರಿ ಮಾಡ್ಕ್ಯಾ ಕನ ಅವ್ಳು ಒಂದೂ ಹೇಳ್‌ತ್‌ಲೇಂತ ಪೊಲೀಸ್ ಹೇಳ್ದೊ. ಚಂಗುಮಣಿನಾ, ನೀಲುನಾ ಯಾರ್ ಈ ಕೊಲೆ ಮಾಡ್ದವುತ ಇನ್ನು ಗೊತ್ತಾತ್‌ಲೆ. ಇದರ್‍ಲಿ ಸೋಮ ಯ್ಯನ ಕೈವಾಡ ಏನಾದ್ರೂ ಉಟ್ಟ್‌ಾಂತ ಕೂಡ ಗೊತ್ತಾತ್ಲೆ.'

'ಒಟ್ರಾಸಿ ಈಗ ಬೋರ್‌ಗುಡ್ಡೆ ದೇವಯ್ಯ ಅಂಕಲ್‌ದ್ ಶತ್ರುಗ ಎಲ್ಲ ಪೊಲೀಸ್ ಕೈಯಿಂದ ಪೆಟ್ಟ್ ತಿನ್ನೊಕಾ ಹೇಳ್ ?'

ಮೀರ್ ಕೇಳ್ತ್.

'ಛೇ ಹಂಗೆಲ್ಲ ಆಕಿಲ್ಲೆ. ಡ್ಯಾಡಿ ಹಂಗೆ ಕಂಡವರ ಮೇಲೆಲ್ಲ ಸಂಶಯು ಪಟ್ಟರೆ ನಾನ್ ಬುಡೊಕಲ್ಲ'

ಜೀವನ್ ಹೇಳ್ತ್.

'ಮೀರಾ, ಬಾ ನಾನ್ ನಿನ್ನ ಕಾರ್‌ಲಿ ಮನೆ ವರ್ಗೂ ಬುಟ್ಟನೆ.'

ಅಯ್ಯೋ ತುಂಬಾ ಥ್ಯಾಂಕ್ಸ್. ಅಂದೊಮ್ಮೆ ನಾನ್ ನಿನ್ನ ಡ್ಯಾಡಿದ್ ಕಾರ್‌ಲಿ ಬಂದ್ ನಂಗೆ ಸಾಕಾಗಿ ಹೋತ್. ಬೋರ್‌ಗುಡ್ಡೆಯುವು ಫ್ರೀ ಲಿಫ್ಟ್.

'ಈ ಸಾರಿ ಡ್ಯಾಡಿ ಅಲ್ಲಲಾ ಕರೀತಾ ಒಳ್ದ್ ?'

'ಅದೇ ಡ್ಯಾಡಿದ್ ಮಜ ತಾನೆ ನೀನ್'

ಮೀರಾ ಕೇಳ್ತ್.

[ಸಶೇಷ]

# ಸುಬ್ಬನ ಕೆಲ್ಸದ ದಿನಚರಿ

ನಾಡ್‌ಗಳ್ಳಿ ಒಬ್ಬೊಬ್ಬರದ್ ಒಂದೊಂದು ತರದ ದಿನಚರಿಗ ಇದ್ದವೆ. ಬೆಳ್ಗೆ ಬಳಿ ಬುಡ್‌ಕನ ಗದ್ದೆ ಏರಿಗಳ್ಳಿ ಹುಲ್ಲು ಕುಯ್ಯುಕನ, ಗುಡ್ಡದೊಳಗೆ ಮಿಯುಕನ, ಸಂತೆಲಿ, ಬಸ್‌ಸ್ಟಾಪ್‌ಗಳ್ಳಿ ಒಬ್ಬನ ಇನ್ನೊಬ್ಬ ದೂರಿಕಂಡವೆ.

ಅವನ ಕೋಳಿ, ಹಂದಿ ನನ್ನ ತೋಟಕೆ ಬಾತ್‌ರಾ, ಅವನ ದನ ಯಾಗೋಳು ನನ್ನ ತೋಟಕೆ ಬಂದದೆ. ಹೇಳುವವನೆ ಇನ್ನೊಬ್ಬರ ತೋಟಕ್ಕೆ ಕಂಡಿನಾಡಿಸಿ ತನ್ನ ದನಗಳ ಮೇಯಕ್ಕೆ ನುಗ್ಗಿಸಿದೆ ಮತ್ತೆ ಅಂವ ಹಂಗೇರ ಇಂವ ಹಿಂಗೆರತ ದೂರಿಕಂಡ್ ನಮ್ಮ ಜಾತಿಲಿ ಕೆಲವು ಕಟ್ಟ ಸ್ವಭಾವದ ಜನಗ ಒಳೊ. ತಾನ್ ಎಷ್ಟ ನೀರ್‌ನ ಅಳದೊಳಗೆ ನಿಂತೊಳೆತ ಈ ಜನಕ್ಕೆ ಗೊತ್ತ್‌ಲೆ. ಇನ್ನೊಬ್ಬಂಗೆ ಹೇಳುವೆ. ಇದೇ ಇವರ ಯಾಗೋಳ್‌ನ ದಿನಚರಿ.

ಹಂಗೆ ನಮ್ಮಲ್ಲಿ ಒಬ್ಬ ಕೆಲಸದ ಸುಬ್ಬನ ದಿನಚರಿ ಏನ್‌ತೇಳ್ರೆ, ಬೆಳ್ಗೆ ಎದ್ದ್ ಕೋಣ, ಎಮ್ಮೆಗಳಿಗೆ ಹುಲ್ಲು ಕುಯ್ಯುಕುತ ಗ್ಯಾನ ಇಲ್ಲೆ. ಕರಿಯುಕನ ಬಾಳೆ ಬುಡಲಿ ನುಚ್ಚು ಅಳಂಬು, ಗಿಣಿಕೆ ಸೊಪ್ಪು ಕೊಯಿಕಂಡ್ ಇದ್ದದೆ. ಬಗ್ಗಿ ನೋಡುತ್ತಿದ್ದದೆ. ಅಂದರೆ ಮಾತಾಡ್‌ಕಿಲ್ಲೆ.

ಮತ್ತೆ 4-5 ರೊಟ್ಟಿ ತಿಂದ್ ಬೇರೆ ಕೆಲಸ ಸುರ್ ಮಾಡ್‌ಕನ ಇವಂಗೆ ಮಾತ್ ಸುರು ಆಗೋದೆ. ನಾನ್ ನಾಲಿಗೆ ಕಚ್ಚಿ ಕಂಡೆ ಇಂದ್ ಯಾರೋ ನೆಂಟ್ರ ನಿಮಿಗೆ ಬಂದವೆ. ಮೀನೋ, ಮಾಂಸೋ ತಂದವೆ ಇವಂಗೆ ತಿಂಬದೆ ಗ್ಯಾನ. ಕೆಲಸ ಆಕುತ ಗ್ಯಾನ ಇಲ್ಲೆ. ಕೆಲಸ ಮಾಡಿಕಂಡ್ ಇರ್‌ಕನ 2 ಕಿ.ಮೀ. ದೂರಲಿ ಬಸ್ಸ ಸದ್ದ್ ಆದರೆ ನಿಂತ್‌ಕಂಡ್ ಆಲಿಸಿದೆ. ಅದರ ಸವುಂಡ್ ಹಾರನ್‌ಲಿ ಇಂತ ಬಸ್ಸ ಹೋದೆತ ಸರಿಯಾಗಿ ಹೇಳಿಬುಟ್ಟದೆ. ಒಂದೊಂದು ದಿನ ಯಾವುದೂ ಸದ್ದ್ ಬರದಿದ್ದರೆ ಹೇಳ್ದೆ, ಓ ಇಂದ್ ಕೊಡಗು ಪ್ರತ್ಯೇಕ ರಾಜ್ಯ ಆಕೆ ಸ್ಟ್ರೈಕ್ ಕಂಡದೆ. ಕೆ.ಆರ್.ಎಂ.ಎಂ. ತ ಹೇಳ್‌ದೆ. ಕೊಡಗು ಬೇರೆ ರಾಜ್ಯ ಆದರೆ ನಾನ್ ಮಂತ್ರಿ ಆನೆ. ನೀವೆಲ್ಲಾ ನಂಗೆ ಓಟು ಕೊಡಿತ ಹೇಳ್ದೆ.

ತೋಟಲಿ ಅಗತೆ ಮಾಡ್‌ಕನ ಎರೆ ಹುಳು ತಿಂಬಕೆ ಕೋಳಿಗ ಬಂದಲ್ಲಿ ಗಿರಿರಾಜ ಹುಂಜ ಘಳಿಗೆಗೊಮ್ಮೆ ಬೆನ್ನು ಮೆಟ್ಟುವ ದನ್ನ ನೋಡಿಕಂಡೆ ನಿತ್ತ್ ಬುಟ್ಟದೆ. ಕೆಲಸ ಬೇಗ ಮುಗುಸೋಕುತ ಗ್ಯಾನ ಇಲ್ಲೆ. ನಾಲ್ಕಂಟಿ ಆಕನ ಓ ಚೊಂಬುಕ ಹಕ್ಕಿ ಮರ್‍ಪದೆ. ಮನೆಲಿ ಅವ್ವ ದೋಸೆ ಹುಯ್ಯುತಾ ಒಳೋ ಏನೋ. ಮನೇಲಿ ಯಾರ್ ಹೆಣ್ಣ ಜನ ಇರದಿದ್ದರೆ ನಂಗೆ ಹೇಳ್ದೆ, ಅಣ್ಣಾ ನೀವು ನಾಲ್ಕಂಟೆಗೆ ಸೂಸಿಲ್ ಹಿಟ್ಟ್‌ಮಾಡಿ. ಅದ್ ನಂಗೆ ತುಂಬಾ ಖುಷಿತ. ಇವಂಗೆ ಏನು ಹೇಳಕುತೇ ಗೊತ್ತಾಲೆ. ಯಾವುದಾದರ್ ಹಬ್ಬ ಬಾಕೆ ಒಂದು ತಿಂಗಳಿಗೆ ಮುಂದೆ ಇಂವ ಲೆಕ್ಕ ಹಾಕ್‌ತ್ತಿದ್ದದೆ. ನೀವು ಹಬ್ಬಕೆ ಏನೆಲ್ಲಾ ಗದ್ದಾಳ ಮಾಡ್ರೆತ. ಕಾವೇರಿ ಸಂಕ್ರಮಣ ಹಬ್ಬಕೆ ಹಿಟ್ಟ್ ಮಡ್‌ಗಿಕೆ ಒಂದು ದಿನಕ್ಕೆ ಮುಂದೆ ಹೇಳ್ದೆ ನಾನ್ ಕೋಳಿ ಕೂಂಗ್‌ಕನೇ ಹೋಗಿ ನಾಟಿ ಮಧ್ಯೆಲಿ ಅಡಂಗಿಕಣೆ. ನೀವು ದೋಸೆಗೆ ಜೆನುತುಪ್ಪ ಹಾಕಿನುಡಗಿತಾ. ನಂಗೆ ನಾಲ್ಕೈದ್ ಗದ್ದೆ ಸುತ್ತಿಕೆ ಉಟ್ಟುತ. ಇವಂಗೆ ಯಾಗೋಳು ಹಬ್ಬ ಬಂದರೆ ಖುಷಿ ಗಡ ಏನಾದರ್ ಭಾರ ವಸ್ತು ಎತ್ತ್‌ಕನ ಧಂ ಕಟ್ಟರೆ ನಾನ್ ತಮಾಷಿ ಮಾಡ್‌ದು. ಏನ್‌ನೇ ನೀನ್ ಮದುವೆ ಮಾಡಿ ಹೆಣ್ಣನ ಹತ್ರ ಹಿಂಗೆ ಧಂ ಕಟ್ಟರೆ ಹೇಂಗೆ ಆದುತ. ಆಗ ಯಾರ್ ನಿಂಗೆ ಸಹಾಯಕೆ ಬಂದವೆತ. ಆಗ ಜೋರಾಗಿ ನಗಾಡ್‌ದೆ. ಈ ಸುಬ್ಬನ ದಿನಚರಿಲಿ ನಾನ್ ಒಬ್ಬನ ಹೀಯ್ಯಾಳಿಸಿ, ಹಂಗಿಸಿ ಬರ್‌ದದ್ ಅಲ್ಲಾ. ಇವನಂಗೆ ಒಬ್ಬೊಬ್ಬರದ್ ಒಂದೊಂದು ತರದ ದಿನಚರಿಗ ಇದ್ದದೆ. ಇದ್ ಮನುಷ್ಯ ಬುದ್ಧಿ, ಬುಡಿಕೆ ಸಾಧ್ಯ ಇಲ್ಲೆ. ನಾಯಿ ಬಾಲ ಕೊಳವೆಗೆ ಹಾಕಿರು ಸೀದ ಆಕಿಲೆ. ಅದ್‌ಡೊಂಕೆ. ನಿಮ್ಮಲ್ಲಿ ಸಹ ಇಂತ ಜನಗ ಇದ್ದರೆ ಉಪಾಯಲಿ ಸುಧಾರ್‍ಸಿಕಂಡ್ ಕೆಲಸ ನಡ್ಸಿ. ●

—ತೆಕ್ಕಡೆ ಬಿ. ರಘುನಾಥ,
ಮುತ್ತಾರ್‌ಮುಡಿ.

---

## ಒಡ್ಸ ಕತೆಗ

1 ಆರ್‌ಮೂರ್ ಗೂಟ, ಸ್ಯಾನ್‌ಬಾಯಿ ತೋಟ ಹೋಕೆ ದಾರಿಯುಟ್ಟು ಪುನಃ ಬಾಕೆ ದಾರಿ ಇಲ್ಲೆ. ಅದ್ ಎಂತಾ ?

2 ಕುಟ್ಟಿಕೆ ನಾಲ್ಕ್ ಜನ, ಹೊಡಿಕಿಕೆ ಎರಡ್ ಜನ, ಗುಡ್ಸಿಕೆ ಒಬ್ಬ. ಅದ್ ಎಂತಾ ?

3 ಕೆಳಗೆ ಗದ್ದೆಲಿ ನೀರ್ ಕಟ್ಟಿ, ಮೇಲೆ ಗದ್ದೆಲಿ ಬೀಜ ಹಾಕುದು. ಅದ್ ಎಂತಾ ?

4 ಮೊಟ್ಟೆ ಕೆಳಗೆ, ಕಾವು ಮೇಲೆ ಅದ್ ಎಂತಾ ?

5 ಅವ್ವ ನಿಂತಲ್ಲೆ, ಮಜ ಸುತ್ತಾ ಸುತ್ತುದು. ಅದ್ ಎಂತಾ ?

6 ಕಿತ್ತ ಹುಲ್ಲು ಚಿಗುರುದುಲೆ. ಅದ್ ಎಂತಾ ?

ಉತ್ತರಗ : 1. ಪೋಡ [ಕೂಳಿ] 2. ಎತ್ತ್ 3. ಕಲ್ಸಿಗೆ, 4. ಕೆಸ, 5. ಬೀಸುವಕಲ್ಲು, 6. ಕೂದಲ್.

ಸಂಗ್ರಹ : ಹುಲಿಮನೆ ಸವಿತಾ, ಮದೆ.

# ನಾನ್ ಅಂಞಣ ಹಾಕಿದ್

1-2-99ನೇ ಸಂಚಿಕೆಲಿ ಶಂಕರನ ಬಸಪ್ಪನವು ಅಂಞಣ ನೋಡ್ದ ಸತ್ಯ ಘಟನೆ ಬರ್‍ದ್ಂಡೊ. ನನ್ನ ಅನುಭವ ಹೇಳ್ನೆ ನೋಡಿ :

1965ರ್ಲಿ ನನ್ನ ಧಾರವಾಡದ ದೇವಿ ಹೊಸೂರು ವ್ಯವಸಾಯ ಸ್ಕೂಲಿಗೆ ತರಬೇತಿಗೆ ಕಳ್ಸಿದೊ. 19 ಜಿಲ್ಲೆಗಳಂದ 19 ಮಾಸ್ಟ್ರಗಳ ಕಳ್ಸಿದ್ದೊ. ಬೆಳಗಾಂ ಜಿಲ್ಲೆ ಕಿತ್ತೂರ್‌ಂದ ಪಾ. ನ. ಕುಲಕರ್ಣಿ ತೇಳುವ ಅಜ್ಜ ಮಾಸ್ಟ್ರ ನನ್ನ ದೋಸ್ತಿ ಆದೊ. ಅವುಕೆ ಇಂಗ್ಲಿಷೇ ಬಾದುಲೆ. ನಾನ್ ಅವುಕೆ ಇಂಗ್ಲಿಷ್ ಕಲ್ಸಿದು. ಅದರ ಬದ್ಲಿಗೆ ಅವು ನಂಗೆ 'ಬಾಲಾಂಜನ' ಹಾಕಿ ನೋಡುವ ಕ್ರಮ ಹೇಳಿಕೊಟ್ಟೊ.

**ತಯಾರಿಸುವ ಕ್ರಮ :** ಸ್ವಲ್ಪ ಮಡ್ಡಿ ಕರ್ಪೂರ [ಆರತಿ ಕರ್ಪೂರ ಆದೆ]ಕ್ಕೆ ಬೆಂಕಿ ಕೊಡ್ಡ್. ಹೊತ್ತ್‌ಕನ ಒಂದು ಲೋಹದ ಬಟ್ಲ್ ಕವುಚ್ಚಿ ಹಿಡಿಯಕು. ಹೊಗೆ ತಟ್ಟೆಲಿ ಶೇಖರ ಆದೆ. ಆ ಮಸಿಗೆ ಸ್ವಲ್ಪ ಜೇನ್ ಹಾಕಿ ಕಲ್ಸಿರೆ ಕಪ್ಪು ಪೇಸ್ಟ್ ಆದೆ.

**ಅಂಜನ ಹಾಕುದು :** ವೈನೆರೆಯದ ಗೂಡೆಗ ಅಥವಾ ಸುಮಾರ್ ಹನ್ನೆರಡ್ ವರ್ಷ ಪ್ರಾಯದೊಳಗಿನ ಹೈದಂಗಳೂ ಆದವೆ. ಅವುಕೆ ನಾಯಿ ಕಚ್ಚಿರಿಕೆ ಆಗದ್ ಸ್ವಲ್ಪ ಕೊತ್ತಿಗಣ್ಣ್ ಇರಕು. ಅಂತ ಮಕ್ಕಳ ತಯಾರ್ ಮಾಡಿಕಂಡ್ ಅವರ ಹೆಬ್ಬೆಟ್‌ನ ಉಗುರಿಗೆ ಅಂಜನ ಹಾಕಕು. ಇದ್ ಎಲ್ಲ ಮಕ್ಕಳಿಗೆ ಕಾಂಬದುಲೆ. ರೆಪ್ಪೆ ಬಡಿಯದೆ ಆ ಉಗುರುನೇ ನೋಡಿಕಂಡಿರಿಕೆ ಹೇಳೊಕು.

**ನೋಡುವ ಕ್ರಮ :** ಅಂಜನ ಇಡ್ವ ಆ ಗೂಡೆಗೆ ಅಥವಾ ಹೈದಂಗೆ ಹಿಂಗೆ ಹೇಳಕು.

'ರಾಮ ರಾಮ ರಾಮ ರಾಮತ ಭಜನೆ ಮಾಡ್. ಗೂಡೆ ಹೇಳ್ದ್. ಒಂದು ಕೆಲ್ಸದ ಆಳ್ ಕೈಲಿ ಮಾಯಿಪು ಹಿಡ್‌ಕಂಡ್ ಬಾತಾ ನೋಡು' ಹೌದು ಅವಂಗೆ ಕಸ ಗುಡ್ಸಿಕೆ ಹೇಳ್, ಗುಡ್ಸಿದೆ ತ ಗೂಡೆ ಹೇಳ್ದ್. ದೀಪ ಹೊತ್ತಿಸಿ ಮಡ್ಗಿಕೆ ಹೇಳ್-ಮಡ್ಗಿತ್. ಕುರ್ಚಿ ತಂದ್ ಮಡ್ಗಿಕೆ ಹೇಳ್-ಕುರ್ಚಿ ಮಡ್ಗಿತ್. ಹನುಮಂತ ದೇವರ ಕರಿ-ಹನುಮಂತ ಬಂದ್ ನಿತ್ತ್‌ಟು. ಕುರ್ಚಿಲಿ ಕೂರಿಕೆ ಹೇಳ್-ಕುದ್ದತ್. ಒಮ್ಮೊಮ್ಮೆ ಹನುಮಂತ ಕೂರದೆ ಸುಮ್ಮನೆ ನಿತ್ತದೆ. ಆಗ ಪುನಃ ರಾಮ ನಾಮ ಗೂಡೆ ಕೈಲಿ ಹೇಳ್ಸಕು. ಆಗ ಆಂಜನೇಯ ಕೊಣಿಯಕೆ ಸುರುಮಾಡ್ದ್. ರಾಮ ನಾಮನ ನಿಲ್ಸ್‌ಕನ ಕುರ್ಚಿಲಿ ಕುದ್ದದೆ. ಆಗ ಬೇಕಾದ ಪ್ರಶ್ನೆ ಕೇಳೊಕು.

**ನನ್ನ ಅನುಭವ :** ಸುರೂಲಿ ನಂಗೆ ಕಲ್ಸಿದ ಕುಲಕರ್ಣಿ ಮಾಸ್ಟ್ರ ಒಬ್ಬ ಹೈದಂಗೆ ಹಾಕಿ ಮಾಡಿ ತೋರ್ಸಿಕೊಟ್ಟೊ. ಅಲ್ಲಿಂದ ನಂಗೆ ಯಾಗೋಳು ಇದೇ ಪ್ರಯೋಗ. ಸ್ವಲ್ಪ ಕೊತ್ತಿಕಣ್ಣ್ ಇದ್ದ ಒಂದು ಮಾಪಿಳ್ಳೆ ಹೈದಂಗೆ ಲಾಯ್ಕ ಕಾಂಬೊತಿತ್ತ್. ಒಮ್ಮೆ ಅಂಜನ ಹಾಕಿರೆ ನಾಲ್ಕೈದ್ ಮಿನಿಟ್ ಮಾತ್ರ ನೋಡಕ್ ಗಡ. ಮತ್ತೆ ಎಲ್ಲ ಮಾಸಿ ಹೋದೆತ ಮಕ್ಕ ಹೇಳುವೆ.

ಒಂದು ದಿನ 'ಕೊಡಗ್'ಲಿ ಇರುವ ನನ್ನ ಮನೆ ತೋರ್ಸಿಕೆ ಹೇಳ್''ತ ಹೈದಂಗೆ ಹೇಳ್ದ್. ಮನೆ ಕಂಡ ಮೇಲೆ ಮನೆಗೆ ಸಂಬಂಧ ಪಟ್ಟ ಎಲ್ಲ ವಿಚಾರ ಕೇಳ್ದ್. ಹೈದ ಎಲ್ಲ ಹೇಳ್ತ್. [ಇದಕ್ಕೆ ಮುಂದೆ ಕೆಲವು ಸಲ ಅಂವ ಸ್ವಲ್ಪ ಸುಳ್ಳು ಕೂಡ ಹೇಳಿತ್ತ್] ಒಮ್ಮೆ ನನ್ನ ಅವ್ವನ ಕರೀತ ಹೇಳ್ದ್. ಅವ್ವ ಬಂದ ಮೇಲೆ ನನ್ನ ಅವ್ವ ಹೆಂಗೆ ಉಟ್ಟ್‌ಟ ತ ಕೇಳ್ದ್—'ಬೆಳಿ ಬಟ್ಟೆ ಕುತ್ತಿಗೆಂದ ಪಾದಕೆ ಮುಟ್ಟ ಸಾಧಾರಣ ಕ್ರಿಸ್ತಾನಿ ಸಿಸ್ಟರ್‌ಗಳಂಗೆ ಉಟ್ಟ್. ತಲೆಗೆ ಬೆಳಿ ಬಟ್ಟೆ ಕಟ್ಟ್‌ಟು. ಅದರ ಬೀಲ ಬೆನ್ನ್‌ಂದ ಕೆಳಗೆ ಮಣಕಾಲ್ ಮುಟ್ಟ ಉಟ್ಟ್'ತ ಕೊಡಗ್‌ಲಿ ಇರುವ ವಿಧವೆಗಳ ವಿವರಣೆ ಪೂರ್ತಿ ಕೊಡ್ತ್. ಆಖೀರಿಗೆ ಆ ಹೈದ 'ನಿಮ್ಮ ಅವ್ವಂಗೆ ಒಂದೇ ಕಣ್ಣ್. ಮತ್ತೊಂದು ಮುಚ್ಚಿ ಹೋವುಟು' ತ ಹೇಳ್ತ್. ಇಲ್ಲಿಗೆ ನೂರಕೆ ನೂರು ನನ್ನ ಸಂಶಯ ಪರಿಹಾರ ಆತ್. ಕಾರಣ ನನ್ನ ಅವ್ವಂಗೆ ಒಂದೇ ಕಣ್ಣ್ ಇದ್ದದ್.

ತರಬೇತಿ ಮುಗ್ಸಿ ನನ್ನ ಕೋಪಟ್ಟೆ ಸ್ಕೂಲಿಗೆ ವಾಪಾಸ್ ಬಂದೆ. ಸಾಯಂಕಾಲ ಮಕ್ಕಳ ಆಡಿಕೆ ಬುಡ್‌ಕನ ನಂಗೆ ಇದೇ ಬಾಲಾಂಜನ ಪ್ರಯೋಗ. ಮೂರನೇ ಕ್ಲಾಸ್‌ನ ಒಂದು ಗೂಡೆಗೆ ಸರೀ ಕಾಂಬತಿತ್ತ್. ಆ ಗೂಡೆ ಅವರ ಮನೆಲಿ ಈ ಸಂಗತಿನೆಲ್ಲ ಹೇಳಿಬುಟ್ಟಿತ್ತ್. ಒಂದು ದಿನ ಅಂಜನ ಹಾಕ್‌ಕನ ಗೂಡೆ 'ಸರ್ ನಮ್ಮ ಹಂದಿನ ಕದ್ದ್ ತಿಂದವು ಯಾರ್'ತ ಇಂದ್ ನೋಡ್ಲೊ. ಅವ್ವ ಹೇಳಿಟ್ಟ್' ತ ಹೇಳ್ತ್. ಸರಿಯುಪ್ಪ, ನೀನೇ ನೋಡು ತ ಹೇಳ್ದ್.

ನಾ ಪ್ರಶ್ನೆ ಕೇಳ್ದಂಗೆ ಗೂಡೆ ಹೇಳಿಕೆ ಸುರು ಮಾಡ್ತ್. 'ಅದಾ, ಚಂಗಪ್ಪ ಮತ್ತೆ ಚಿಣ್ಣಪ್ಪ ತೋಟದೊಳಗೆ ಹಂದಿನ ಬಡ್ಡ್ ಕೊಂದೊ. ಹೊಳೆಕರೆಲಿ ಮಾಸ ಮಾಡ್ತ ವಳೊ. ಎರಡ್ ನಾಯಿಗ ಮತ್ತೆ ಚಂಗಪ್ಪನ ಮಂಜ ಕುದ್ದೊಳೊ. ಮಾಸ ಪಾಲ್ ಮಾಡಿಕಂಡ್ ಚಿಣ್ಣಪ್ಪ ಮಾನಿ ಗದ್ದೆಲಿ ಹೋದೆ. ಚಂಗಪ್ಪ ಕಡ್ಕಲ್ ದಾಟಿ ಅವರ ಅಂಗಳಕ್ಕ ಇಳ್‌ದೊ' ಹಿಂಗೆ ಗೂಡೆ ಎದ್‌ರೆದ್‌ರ್ ಕಂಡಂಗೆ ಹೇಳ್ತ್ !

ನಾನ್ ಇಸ್ಕೂಲಿಗೆ ಯಾಗೋಳು ಬುತ್ತಿ ತಕಂಡ್ ಹೋತಿದ್ದೆ. ಚಂಗಪ್ಪ ತೇಳುವವರ ಮನೆಂದ ಒಮ್ಮೊಮ್ಮೆ ಮೀನ್ ಮಾಸ, ಗೈಪ್ ಏನಾರ್ ಮಾಡ್ರೆ ನಂಗೆ

ಕಳ್‌ಸ್ತಿದ್ದೊ. ಈ ಅಂಜನ ನೋಡ್ದ ಆರ್ ದಿನಕೆ ಹಿಂದೆ ನಂಗೆ ಹಂದಿ ಗೈಪು ಕಳ್ಸಿದ್ದೊ !

ಈ ಗೂಡೆ ಮನೆಗೆ ಹೋಗಿ ನಡ್ದ ಸಂಗತಿ ಹೇಳಿಟ್ಟ್. ಜನರ ಬಾಯಿ ಸುಮ್ಮನಿದ್ದದೆಯಾ? ಅದ್ ಏನೆಲ್ಲಾ ರಂಪ ಆಗಿ, ನಾನ್ ಪೆಟ್ಟ್ ತಿನ್ನದೆ ಬದ್‌ಕಿ ಬಂದದೇ ದೊಡ್ಡದ್‌ತೆಳಕ್. ಅಲ್ಲಿಗೆ ಆ ಪ್ರಯೋಗನ ಬುಟ್ಟೆ.

ಕೂಡಿಗೆಲಿ ಸಂಗೀತ ಮಾಸ್ಟ್ರ ದಿ|| ಎ. ಸುಬ್ಬರಾವ್, ಮಡಿಕೇರಿಲಿ ಭಾರತೀಯ ನೃತ್ಯ ಕಲಾಶಾಲೆ ಸ್ಥಾಪಕರಾಗಿದ್ದೊ. ಅವುಕೆ ಈ ಅಂಜನದ ವಿಶಯ ಹೇಳಿಕೊಟ್ಟೆ. ಅವು ಒಮ್ಮ ಹೇಳ್ದೊ. ನಾನ್ ಪ್ರಯೋಗ ಮಾಡಿ ನೂರಕ್ಕೆ ನೂರು ಸಕ್ಸಸ್ ಆತ್ ತ.

ಒಟ್ಟಾರೆ ಇದರ ರಹಸ್ಯ ಏನ್‌ತ ನಂಗೆ ಗೊತ್ತ್‌ಲೆ. ವಿಜ್ಞಾನಿಗ ಸುಳ್ಳುತ ಹೇಳುವೊ, ಶಾಸ್ತ್ರಗಾರರ್ ನಿಜಾತ ಹೇಳುವೊ. ನಾನಂತೂ ಮಾಡ್ದ ಅನುಭವ ಅಲ್ಲದೆ ಕಣ್ಣ್‌ಲಿ ನೋಡ್ದ ಅನುಭವ ಇಲ್ಲೆ.

ಬಾಲಾಂಜನ, ಪಾತಾಳಾಂಜನ, ದ್ರವ್ಯಾಂಜನ, ಗರುಡಾಂಜನ ಹಿಂಗೆ ಉಟ್ಟ್ ಗಡ. ನಾವು ಅಂಞಣತ ಹೇಳ್ದ್.

—ಬಾಚರಣಿಯಂಡ ಅಪ್ಪಣ್ಣ, ಕುಶಾಲನಗರ.

## ಕೋಳಿನ ಕೇಳಿ ಸಂಬಾರ ಅರಿಯೊಕಾ

ಕೊಪ್ಪದ ಬೋಪುನ ಮಗ್ಳ್ ಅಮ್ಮಣಿನ ನೋಡಿಕೆ ಹೊಸ ನೆಂಟ್ರ್ ಯಾರೋ ಬಂದಿದ್ದೊ ಗಡ. ಅಮ್ಮುಣಿ ಬಾರೀ ಪೊರ್ಲುನ ಗೂಡೆ. ಲಾಯಿಕ ತಿದ್ದಿ ಮಾಡ್ದ ಗೊಂಬೆನ ಹಂಗೆ ಉಟ್ಟ್. ಹತ್ತನೆ ಕ್ಲಾಸ್ ಪಾಸ್ ಮಾಡಿ ಮುಂದೆ ಓದಿಕೆ ಆಗದ ಮನೇಲೇ ಉಟ್ಟ್. ಪರೀಕ್ಷೆಗೆ ಹೋಕೆ ಮುಂದೆ ಅವಳ ಅಪ್ಪ, ಪಾಸಾದರೆ ನಿಂಗೆ ಕಾಲೇಜ್ ಇಲ್ಲದಿದ್ದರೆ ಮ್ಯಾರೇಜ್‌ತ ತಮಾಷಿಗೆ ಹೇಳಿಕಂಡೇ ಇರ್ತಿತ್. ಹಂಗಾಗಿ ಹಗಲೂ ರಾತ್ರಿ ಕಷ್ಟಪಟ್ಟ್ ಓದಿದ ಗೂಡೆ ಒಳ್ಳೆ ಮಾರ್ಕ್ ತೆಗ್ದ್ ಫಸ್ಟ್‌ಕ್ಲಾಸ್‌ಲೇ ಪಾಸ್ ಮಾಡಿಟ್ಟ್. ಆದರೆ ರಿಸಲ್ಟ್ ಬಂದ ಮ್ಯಾಲೆ, ಪಾಸಾದರೂ ಫೇಲಾದರೂ ನಿಂಗೆ ಮ್ಯಾರೇಜ್‌ತ ಹೇಳಿ ಮುಂದಕೆ ಓದಿಕೆ ಕಳ್ಸತ್ಲೆ. ಕಾಲೇಜಿಗೆ ಹೋನೆತ ಹಟ ಮಾಡಿ ಮುರ್ಟ್‌ಕಂಡ್ ಒಂದೆರ್ಡ್ ದಿನ ಅನ್ನ, ನೀರ್ ಬುಟ್ಟ್ ಕುದ್ದರೂ ಬೋಪುನ ಮನ್ಸ್ ಬದ್ಲಾತ್ಲೆ. ಓದಿದವು ಎಲ್ಲ ಕೆಲ್ಸ ಇಲ್ಲದೆ ಬೀದಿ ಸುತ್ತಿಕಂಡ್ ಒಳೊ. ಇನ್ನ್ ನೀನ್ ಓದಿ ಯಾವ ದೇಶ ಆಳಿಕೆ ಉಟ್ಟ್ ಹೇಳ್. ಸುಮ್ಮನೆ ಹೇಳ್ದಷ್ಟ್ ಕೇಳಿಕಂಡ್ ಬಿದ್ದಿರ್. ಯಾವುದ್ ಮಾಡೊಕು, ಯಾವುದ್ ಮಾಡ್ಕಾಗದ್‌ಂತೇಳುವಂತದ್ ನಂಗೆ ಗೊತ್ತುಟುತ ಜೋರ್ ಮಾಡಿ ಅವುಳ್ನ ಸುಮ್ಮನಿರ್ಸಿಟು. ಪೊಪ್ಪನ ಮನ್ಸ್ ಬದ್ಲಾದೂ ಒಂದೇ, ಕಲ್ಲ್ ನೀರಾದೂ ಒಂದೆತ ಗ್ಯಾನ ಮಾಡಿಕಂಡ್ ಮುಂದಕೆ ಓದುವ ಆಸೆನ ಬುಟ್ಟ್ ಸುಮ್ಮಂಗಾತ್.

ಎಲ್ಲಾದರ್ ಒಂದು ಒಳ್ಳೆ ಕಡೆ ಸಂಬಂಧ ನೋಡಿ ಆದಷ್ಟ್ ಬ್ಯಾಗ ಮಗಳ್ನ ಮದುವೆ ಮಾಡಿಕೊಟ್ಟ್ ಬುಡೊಕುಂತೇಳ್ದ್ ಬೋಪು ಮತ್ತೆ ಅವನ ಹೆಣ್ಣ್ ಬೊಳ್ಳಮ್ಮನ ಗ್ಯಾನ. ನೆಂಟ್ರ್ ಪರಿಚಯುದವು ಎಲ್ಲವರ ಹತ್ರ ಮಗಳಿಗೆ ತಂದ್ ಮಾಡಿಕೆ ಹೇಳ್ದೊ. ಮೂರ್ನಾಲ್ಕ್ ಕಡೆಂದ ಬಂದ್ ನೋಡಿಕಂಡ್ ಹೋಗೊಳೊ. ಅವು ಯಾರೂ ಇವುಕೆ ಒಪ್ಪಿಗೆ ಆತ್ಲೆ. ಈಗ ಬಂದ ನೆಂಟ್ರ್ ಬಾಳಾ ಅನುಕೂಲಸ್ಥರ್ ಗಡ. ಬೋಪು, ಅವನ ಹೆಣ್ಣ್‌ಗೆ ಎಲ್ಲ ತುಂಬಾ ಇಷ್ಟ ಆವುಟು. ಆದರೆ ಮಗಳಿಗೆ ಮಾತ್ರ ಹುಡುಗನ ಒಂಚೂರೂ ಹಿಡ್ಸಿತ್ಲೆ.

ನಮ್ಮ ತ್ವಾಟದ ಬೇಲಿ ಅವರ ಮನೆ ಕರೇಗಾನೇ ಹೋದೆ. ತ್ವಾಟದೊಳಗೆ ತಿರ್ಗಾಡಿಕಂಡ್ ಬಂದ ನಾನ್ ಬೋಪುನ ಮನೆ ಹಕ್ಕಲೆ ಬಾಕನ ಜೋರು ಜೋರಾಗಿ ಮಾತಾಡ್ತಾ ಇದರ್ಗ ಕೇಳ್ತ್. ಇಲ್ಲಿ ಎಂತದೋ ರಗಳೆ ಸುರಾವುಟು ಕಂಡದೆಲೆ! ನೋಡಿಕಂಡ್ ಬಾನೊಂತೇಳಿ ಅತ್ತ ಹೋದೆ. ಹೋಗಿ ಉಬ್ಬುಲು ತೆಗ್ದ್ ಅಂಗಳಕೆ ದಾಟುದೇ ಇದರ್ಗ, ಅವರ ಎರ್ಡ್ ನಾಯಿಗ–ಜಿಮ್ಮಿನೂ, ಪಿಂಟುನೂ ನನ್ನ ತಿಂದ್‌ಬುಡುವ ಹಂಗೆ ಬೊಗುಳಿಕಂಡ್ ಹಾರಿಕಬಂದ್ ಬಟ್ಟೊ. ನಾಯಿಗಳಿಗೆ ಜೋರು ಮಾಡಿಕಂಡ್ ಬೋಪುನೂ ಹಿಂದೆಂದೇ ಓಡಿಬಾತ್.

ಕೈಯ್ಯಾಲೆಲಿ ಹೋಗಿ ಕುರ್ಚಿಲಿ ಕುದ್ದ್‌ಕಂಡೆ, ಬೋಪು ಕಾಲ್ ನೀಡಿ ಐಮರಲಿ ಕುದ್ದತ್. ಅವನ ಹೆಣ್ಣ್ ಹಿಂದಕೆ ಕೈ ಕಟ್ಟಿಕಂಡ್ ಗೋಡೆಗೆ ಒರ್ಗಿ ನಿತ್ತಿತ್ತ್. ಅಮ್ಮುಣಿ ಕಟ್ಟಳೆ ತಬ್ಬಿಕಂಡ್ ಬಾಗ್‌ಲ್ ಕರೇಲಿ ನಿತ್ತಿತ್ತ್. ಸಣ್ಣ ಮಕ್ಕ, ಹೈದಂಗ ಎರ್ಡ್ ಮನೆ ಎದ್‌ರ ಪ್ಯಾರ್ಲ ಮರ ಕೊಡಿಲಿ ಹತ್ತಿಕಂಡ್ ಅವರ ಪಾಡಿಗೆ ಆಟ ಆಡಿಕಂಡಿದ್ದೊ.

ಬಾರಿ ಜೋರಾಗಿ ಮಾತಾಡ್ತಾ ಇದರ್ಗ ಕೇಳ್ಸಿತ್. ಹಂಗಾಗಿ ನೋಡಿಕಂಡ್ ಹೋನೆತ ಬಂದೆತ ನಾನ್ ಹೇಳ್ದೆ.

ನಿನ್ನೆ ನಮ್ಮ ಅಮ್ಮುಣಿನ ನೋಡಿಕೆ ಒಂದು ಕಡೆಂದ ನೆಂಟ್ರ್ ಬಂದಿದ್ದೊ, ಅವರ ಬಗ್ಗೆ ಈಗ ಮಾತಾಡ್ತಾ ಇದ್ದೊತ ಸುರುಮಾಡಿ, ಅವರ ಕುಲ, ಗೋತ್ರ ಎಲ್ಲ ತಿಳ್ಸಿ, ಅವುಕೆ ಕಾಫಿ ಸುಮಾರ್ ಬಂದದೆ, ಕಾರ್, ಜೀಪು ಎಲ್ಲ ಮಾಡಿಕಂಡ್ಯೊಳೊ. ಹುಡುಗ ನೋಡಿಕೆ ಒಳ್ಳೆ ದೊರೆಮುಜನ ಹಂಗೆ ಉಟ್ಟ್.

ಗೂಡೆನ ನೋಡಿ ಅವುಕ್ಕೂ ಇಷ್ಟ ಆವುಟುತ ಗಂಡನೂ, ಹೆಣ್ಣ್ಣನೂ ಒಂದೇ ಉಸುರಿಗೆ ಹೇಳ್ದೊ.

ಸರಿ, ಅಮ್ಮುಕೂಸು ಎಂತ ಹೇಳ್ದಿತ ನಾನ್ ಕೇಳ್ದೆ. ಸಣ್ಣತಿರ್ಂದೇ ನಂಗೆ ಅವುಳ್ನ ಕಂಡ್ರೆ ಬಾಳಾ ಖುಷಿ. ಕೊಂಡಾಟಕೆ ನಾನ್ ಅವುಳ್ನ ಅಮ್ಮು ಕೂಸುತೇ ಕರಿಯೊದು.

ಅವುಳ್ನ ಎಂತ ಕೇಳ್ದು ? ಕೋಳಿನ ಕೇಳಿ ಸಂಬಾರ ಅರಿಯೊಕಾ ? ಇಂತಹ ವಿಷಯಗಳ್ನೆಲ್ಲ ದೊಡ್ಡೊವೇ ಮಾತಾಡಿ ತೀರ್ಮಾನ ಮಾಡೊಕು ಹೊರ್ತು, ಹುಡುಗಾಟದ ಮಕ್ಕಳಿಗೆ ಇದೆಲ್ಲ ಹೆಂಗೆ ಗೊತ್ತಾದೆ ಹೇಳ್ತ ಬೋವು ಹೇಳ್ತ್.

ಅವುಳೇನ್ ಹಾಲ್ ಕುಡಿಯುವ ಕೂಸು ಅಲ್ಲ. ತಪ್ಪು ಸರಿ ಅರಿಯುವ ತಿಳುವಳಿಕೆ ಅವುಳಿಗೂ ಬಂದುಟು. ಈ ವಿಚಾರಲಿ ನೀವು ಯಾವುದೇ ತೀರ್ಮಾನ ತಕಣಿಕೆ ಮುಂದೆ ಅವಳ ಒಪ್ಪಿಗೆ ಉಟ್ಟಾ? ಇಲ್ಲ್ಯಾ ತೇಳುದರ್ನ ಮೊದಲಿಗೆ ತಿಳ್ಕಣಕುತ ಹೇಳ್ದೆ.

ಅಷ್ಟೊತ್ತು ಮುಟ್ಟ ಬಾಗ್ಲ್ ಕರೇಲಿ ನಮ್ಮ ಮಾತ್ ಆಲ್ಸಿಕಂಡ್ ನಿತ್ತಿದ್ದ ಗೂಡೆ ನನ್ನ ಹತ್ರ ಓಡಿ ಬಂದ್, ನಾನ್ ಕುದ್ದ ಕುರ್ಚಿ ಕೈ ಮ್ಯಾಲೆ ಮರ್ಗಿ, ನನ್ನ ಹೆಗ್ಲ್ ಮ್ಯಾಲೆ ಕೈ ಊರಿ ಕುದ್ದ್‌ಕಂಡ್ ನೀನಾದರ್ ಇವುಕೆ ಅರ್ಥ ಆಗುವ ಹಂಗೆ ಹೇಳ್ ಬೋಜಪ್ಪ. ನಾನ್ ಎಷ್ಟೇ ಹೇಳ್ರೂ ಇವರ್ದು ಒಂದೇ ಹಟ. ನನ್ನನ ನೋಡಿಕೆ ಬಂದ ಹುಡುಗನ ಮನೆಯವುಕೆ ಬೇಕಾದಷ್ಟು ಐಶ್ವರ್ಯ ಉಟ್ಟು, ಅವು ಒಳ್ಳೆ ಮನೆಸ್ಥಾನದವು ಎಲ್ಲಾ ಸರಿ. ಆದರೆ ಹುಡುಗ ! ಅಂವ ಕಲಿಯದ ಕೆಟ್ಟ ಚಾಳಿಗಳೇ ಇಲ್ಲೆತ ಎಲ್ಲವೂ ಹೇಳುವೆ. ಮರ್ಯಾದಸ್ಥರ್ ಒಬ್ಬರೂ ಅವನ ಬಗ್ಗೆ ಒಳ್ಳೆ ಮಾತಾಡುದ್ಲೆ. ಹೋದಲ್ಲೆಲ್ಲ ಹೆಂಡ ಕುಡ್ಕಂಡ್ ಗಲಾಟೆ ಮಾಡುದು, ಕಂಡ ಹೆಣ್ಮಕ್ಕಳ ಹಿಂದೆ ಸುತ್ತುದು ಇಂತಹವುಗಳಲ್ಲೇ ಅಂವ ಕಾಲ ಕಳಿತಾ ಇದ್ದದೆ. ಇಂತಹವನ ಕಟ್ಟಿಕಂಡ್ ನಾನ್ ನೆಮ್ಮದಿಯಾಗಿ ಬಾಳಿಕೆ ಸಾಧ್ಯನಾ ಹೇಳ್ ?

ಮೊದುವೆ ಆಕೆ ಮುಂದೆ ಕೆಲವು ಹುಡುಗರ್ ಹಂಗೇ ಇದ್ದವೆ. ಆವರ ಕುತ್ತಿಗೆಗೆ ಒಂದು ಹೆಣ್ಣ್ ಕಟ್ಟಿದ ಮ್ಯಾಲೆ ಎಲ್ಲ ಸರಿಯಾದೆ, ಅದ್‌ಕೆಲ್ಲ ನೀನ್ ತಲೆಕೆಡ್ಸಿಕಣೊಕುತ ಇಲ್ಲೆತ ಹೇಳ್ತ್ ಬೋವು.

ಅಂತಹವರ್ನ ಸೆರಿಮಾಡುವ ಕೆಲ್ಸ ನಂಗೆ ಬ್ಯಾಡ. ಅದ್ ನನ್ನಿಂದ ಆಗುವಂತದೂ ಅಲ್ಲತ ಹೇಳಿ ಅಮ್ಮುಣಿನ ಹಟ ಹಿಂಗೇ ಸುಮಾರ್ ಹೊತ್ತು ಇವರ ಮಾತ್ ಸಾಗಿತ್. ಪೊಪ್ಪನೂ, ಅಮ್ಮನೂ ಎಷ್ಟೇ ಹೇಳ್ರೂ ಗೂಡೆ ಒಪ್ಪಿಕೆ ತಯಾರಿಲ್ಲೆ. ಮಧ್ಯೆ ನಾನ್ ಏನಾದರ್ ಹೇಳ್ರೆ ಹೆಚ್ಚ್‌ಕಮ್ಮಿ ಆದೂತ ನಂಗೂ ಮಾತಾಡಿಕೆ ಒಂತರಾ ಅಂಜಿಕೆ. ಅಂತೂ ಸುಮ್ಮನಿರ್‌ಕಾಗದೆ ಕಡೆಗೆ, ಗೂಡೆಗೆ ಇಷ್ಟ ಇಲ್ಲದ ಮ್ಯಾಲೆ ನೀವು ಹಟ ಮಾಡಿಕೆ ಹೋಬಡಿ. ಮೊದುವೆ ಆದ ಮ್ಯಾಲೆ ಹುಡುಗ ಕೆಟ್ಟ ಚಾಳಿಗಳ್ನೆಲ್ಲ ಬುಟ್ಟದೆಂತೇಳ್ದು ಯಾವ ಗ್ಯಾರಂಟಿ ? ಕಲ್ತ ಅಭ್ಯಾಸನ ಅಂವ ಬುಡದೇ ಇದ್ದರೆ ಕಡೇವರೆಗೂ ಇವುಳು ಕಣ್ಣೀರ್‌ಲಿ ಕೈ ತೊಳೆಯುವ ಹಂಗೆ ಆದು. ಇಂತಹದರ್ನೆಲ್ಲ ಗ್ಯಾನಮಾಡಿ ನಿಧಾನವಾಗಿ ತೀರ್ಮಾನ ತಕಣಿತ ಸಮಾಧಾನ ಹೇಳಿಬುಟ್ಟು ಹೊರ್ಟ ಬಂದೆ. ●

— ಚಾಂಗನ ಸಿ. ಪೂವಯ್ಯ, ಹಂಪಿ

## ಕ್ಲಾಸ್‌ಲಿ ನಾನಿರ್ಕನ ಒಮ್ಮೆ ನಡ್ದ ಪ್ರಸಂಗ

ನಾನಾಗ ಸಣ್ಣವ್ಳು. ಅಂದರೆ ಮೇಕೇರಿ ಶಾಲೆಲಿ ಐದ್ನೆ ಕ್ಲಾಸ್‌ಗೆ ಹೋಗ್ತಿದ್ದೆ. ಆಗ ಆ ಕ್ಲಾಸ್‌ಲಿ ಇಂಗ್ಲೀಸ್‌ನ ಎ ಬಿ.ಸಿ.ಡಿ ಉಟ್ಟಲಾ ಅದನ್ನ ಕಲಿಯಕೆ ಸುರು ಮಾಡಿದ್ದೊ ಅಷ್ಟೆ. ಮತ್ತೆ ಹಳ್ಳಿ ಶಾಲೆತ ಹೇಳ್ದ ಮೇಲೆ ಕೇಳೊಕಾ ? ಅರೆಭಾಷೆ ಬುಟ್ರೆ ಮತ್ತೆ ಕನ್ನಡ ಮಾತ್ರ ಬರ್ತಿದ್ದದ್. ಅದೂಸಾ ಸರಿಯಾಗಿ ಬರ್ತಿಲ್ಲೆ. ಅಂತಾ ಪರಿಸ್ಥಿತಿ. ಅಂತೂ ಮಾಸ್ಟ್ರನ ಹೆದ್ರಿಕೆಗೆ ಬೇಕಾಗಿ ಹೆಂಗಾರ್ ಮಾಡಿ ಎ.ಬಿ.ಸಿ.ಡಿ ಯೆಲ್ಲಾ ಕಲ್ತ್ ಬುಟ್ಟೆ.

ಹಿಂಗೆ ಅದೇ ಕ್ಲಾಸ್‌ಲಿ ಇರ್ಕನ ಒಮ್ಮೆ ಟೀಚರ್ ಟ್ರೈನಿಂಗ್‌ನವು ಪಾಠ ಮಾಡಿಕೆತಾ ನಮ್ಮ ಶಾಲೆಗೆ ಬಂದಿದ್ದೊ. ಅದರ್ಲಿ ಒಂದ್ ಮಾಸ್ಟ್ರ ನಮ್ಮ ಕ್ಲಾಸಿಗೆ ಇಂಗ್ಲೀಷ್ ಪಾಠಕೂ ಬಂದಿದ್ದೊ. ಒಂದಿನ ಹಿಂಗೇ ಪಾಠ ಮಾಡಿ ಆದ ಮೇಲೆ ಆ ಮಾಸ್ಟ್ರ ಮಕ್ಕಳೊಟ್ಟಿಗೆ 'Understand'? ಅಂತ ಕೇಳ್ದೊ. ಎಲ್ಲಾ ಮಕ್ಕ ಇದೆಂತ ವಿಚಿತ್ರ ಪ್ರಶ್ನೆನ ಸಾರ್ ಕೇಳುವೆಂತ ಗ್ಯಾನ ಮಾಡ್ದೊ. ಯಾವ ಮಕ್ಕಳಿಗೆ ಆ ಪದದ ಅರ್ಥವೇ ಗೊತ್ತಾತ್ಲೆ. ಎಲ್ಲವೂ ಮಾಸ್ಟ್ರ ಉತ್ತರ ಹೇಳದಿದ್ದರೆ ಎಲ್ಲಿ ಪೆಟ್ಟು ಸಿಕ್ಕಿದೆಂತಾ ಹೆದ್ರಿ ಮುದ್ದೆ ಆದೊ.

ಸಾರ್, ನನ್ನೊಟ್ಟಿಗೆಸಾ ಅದೇ ಪ್ರಶ್ನೆನ ಕೇಳ್ದೊ. ಸ್ವಲ್ಪ ಹೊತ್ತ್ ಹಂಗೆ ಗ್ಯಾನ ಮಾಡ್ದೆ ಮತ್ತೆ ಗೊತ್ತಾತ್. Under ತಾ ಹೇಳ್ರೆ ಕೆಳ್ಗೆ Stand ತಾ ಹೇಳ್ರೆ ನಿತ್ತ್‌ಕಂಬದು ಅಲಾ. ನನ್ನ ಹತ್ರ ಡೆಸ್ಕ್ ಇದ್ದ ಕಾರಣ ನಂಗೆ ಕೆಳ್ಗೆ ನಿಲ್ಲಿಕಾತ್ಲೆ. ಇಸ್ನ ಮೇಲೆ ನಿಂತ್‌ಕಣಾತ ಹೇಳಿ ಮ್ಯಾಲೆ ಎದ್ದ್ ನಿಂತ್‌ಕಂಡೆ. ಇದ್ದ ಮಕ್ಕಳಿಗಿಂತಾ ನಾ ಸ್ವಲ್ಪ ಉಷಾರ್ ಇದ್ದೆ. ಹಂಗೆ ನನ್ನ ನೋಡಿ ಬ್ಯಾರೆ ಎಲ್ಲಾ ಮಕ್ಕ ನಿಂತ್‌ಕಂಡೊ.

ಇದರ್ನ ನೋಡಿ ಸಾರ್‌ಗೆ ಆಶ್ಚರ್ಯ ಆಗಿ ಯಾಕೆ ನಿತ್ತದ್‌ತಾ ನನ್ನೊಟ್ಟಿಗೆ ಕೇಳ್ದೊ. ಆಗ ನಾ ಹೇಳ್ದೆ ನೀವು ಹೇಳ್ದಂಗೆ ಕೆಳ್ಗೆ ನಿಲ್ಲಿಕೆ ಆತ್ಲೆ ಅದ್ಕೆ ಮ್ಯಾಲೆ ನಿಂತ್‌ಕಂಡೆತಾ. ಇದ್ ಕೇಳಿ ಮಾಸ್ಟ್ರಗೆ ಒಮ್ಮೆ ಸಿಟ್ಟ್ ಬಂದರೂ ಸಹ ಮತ್ತೆ ಜೋರಾಗಿ ನಗಾಡ್ದೊ ●

—ಕುಯಿಂತೋಡು ಸ್ಮಿತಾ ಅಮೃತರಾಜ್

## ಸಂತಾಪ ಸೂಚನೆ

**ಶ್ರೀಮತಿ ಕುದುಪಜೆ ರೋಹಿಣಿ W/o ಕುದುಪಜೆ ಗಿರೀಶ್, ತಣ್ಣಿಮಾನಿ**

ದಿನಾಂಕ **30-1-99** ರಲ್ಲಿ ತುಂಬು ಗರ್ಭಿಣಿಯಾಗಿ, ಗಂಡು ಮಗುವಿಗೆ
ಜನ್ಮ ನೀಡಿ, ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರಿನ ಆಸ್ಪತ್ರೆಗೆ ಕರೆದೊಯ್ದರೂ
ಪ್ರಯೋಜನವಾಗದೆ ನಮ್ಮನ್ನಗಲಿರುವ ನಿನ್ನ ದಿವ್ಯಾತ್ಮಕ್ಕೆ
ಚಿರಶಾಂತಿಯನ್ನು ಕೋರುವ,

**ಶ್ರೀ ಕೈಬಿಲಿರ ಸೋಮಯ್ಯ, ಬಿ ಬಾಡಗ, ಚೇರಂಬಾಣೆ**

**ಶ್ರೀ ಕೈಬಿಲಿರ ಎಸ್. ಜಯಪ್ರಕಾಶ್, (ರಘು) ಬಿ. ಬಾಡಗ ಚೇರಂಬಾಣೆ**

---

## ಐಕೊಳದ ಶ್ರೀ ಅಯ್ಯಪ್ಪ ಯುವಕ ಸಂಘಕ್ಕೆ ಪುನರಾಯ್ಕೆ

ಐಕೊಳದ ಶ್ರೀ ಅಯ್ಯಪ್ಪ ಯುವಕ ಮತ್ತು ಯುವತಿ ಮಂಡಳಿಗಳ ಮಹಾ ಸಭೆಯು **31-1-99** ರಂದು ನಡೆಯಿತು. ಯುವ ಸಂಘದ ಅಧ್ಯಕ್ಷರಾಗಿ **ಕೊಂಪುಳೀರ ಗಣೇಶ್ ಬೋಪಯ್ಯನವರು** 4ನೇ ಬಾರಿಗೆ ಅವಿರೋಧ ವಾಗಿ ಪುನರಾಯ್ಕೆ ಆದರು. ಉಪಾಧ್ಯಕ್ಷರಾಗಿ **ಕೊಂಪುಳೀರ ಸುಬ್ಬಯ್ಯ**, ಕಾರ್ಯದರ್ಶಿಯಾಗಿ **ಮಣ್ಣಂಡ್ರ ಮುದ್ದಯ್ಯ**, ಖಜಾಂಚಿಯಾಗಿ **ಕೊಂಪುಳೀರ ಲಕ್ಷ್ಮಪತಿ**, ಕ್ರೀಡಾ ಕಾರ್ಯದರ್ಶಿಯಾಗಿ **ಪಾರೇರ ಯತೀಶ್** ಆಯ್ಕೆಗೊಂಡರು. ಹಾಗೂ ಹಿಂದಿನ ಕಾರ್ಯಕಾರಿ ಮಂಡಳಿಯನ್ನು ಮುಂದುವರಿಸುವಂತೆ ತೀರ್ಮಾನಿಸಲಾಯಿತು.



ಅಧ್ಯಕ್ಷ ಕೊಂಪುಳೀರ ಗಣೇಶ್ ಬೋಪಯ್ಯ



ಅಧ್ಯಕ್ಷೆ ಕೊಂಪುಳೀರ ಕುಸುಮ ಬೋಪಯ್ಯ

ಯುವತಿ ಮಂಡಳಿ ಅಧ್ಯಕ್ಷೆಯಾಗಿ **ಕೊಂಪುಳೀರ ಕುಸುಮ ಬೋಪಯ್ಯ** ಅವಿರೋಧವಾಗಿ ಆಯ್ಕೆಯಾದರು. ಉಪಾಧ್ಯಕ್ಷೆಯಾಗಿ **ಕೊಂಪುಳೀರ ಗೀತಾ ಅರುಣ**, ಕಾರ್ಯದರ್ಶಿಯಾಗಿ **ಉಳುವಾರನ ಶೀಲಾ ಪೊನ್ನಪ್ಪ**, ಖಜಾಂಚಿಯಾಗಿ **ಕೊಂಪುಳೀರ ಸುನಿ ದಿನೇಶ್**, ಕ್ರೀಡಾ ಕಾರ್ಯದರ್ಶಿಯಾಗಿ **ಕಲ್ಲುಮುಟ್ಲು ರೇಖಾ ಚನ್ನಬಸಪ್ಪ** ಸಾಂಸ್ಕೃತಿಕ ಕಾರ್ಯದರ್ಶಿಯಾಗಿ **ಪಾರೇರ ರೆಮ್ಮಿ ಚಂಗಪ್ಪ** ಅವರನ್ನು ಅವಿರೋಧವಾಗಿ ಆಯ್ಕೆ ಮಾಡಲಾಯಿತು. ಗೌರವ ಅಧ್ಯಕ್ಷೆಯಾಗಿ **ಕೊಂಪುಳೀರ ಚಂದ್ರಮ್ಮನವರನ್ನು** ನೇಮಿಸಲಾಯಿತು. ಹಾಗೂ ಹಿಂದಿನ ಕಾರ್ಯಕಾರಿ ಮಂಡಳಿಯನ್ನು ಮುಂದುವರಿಸುವಂತೆ ತೀರ್ಮಾನಿಸಲಾಗಿದೆ ಎಂದು ತಿಳಿದುಬಂದಿದೆ.

K R N N-240 10-01-96 TCI Kar. 09592

ಕರೆ–ನೊರೆ–ವಿಷಾದ

# ಕೊಡಗು ಸಂಗಾತಿ ಮಹಾ ಓದುಗರಲ್ಲಿ ಮತ್ತು ಅರೆಭಾಷಿಕ ಗೌಡ ಬಾಂಧವರಲ್ಲಿ ಕಳಕಳಿಯ ಮನವಿ

ಕೊಡಗು ಸಂಗಾತಿ ಪಾಕ್ಷಿಕವು ದಿನಾಂಕ **1-4-97** ರಿಂದ ಇಲ್ಲಿಯತನಕ ಎಡೆಬಿಡದೆ ನಿರಂತರವಾಗಿ ಹೊರಬರುತ್ತಲಿದ್ದು, ಮುಖ್ಯವಾಗಿ ಕೊಡಗು ನಾಡಿನ ಅರೆಭಾಷಿಕರ ಏಕೈಕ ಮಾಧ್ಯಮವಾಗಿ ಬಂದಿದೆ. ತನ್ನ ನಾಡಿನ ಗ್ರಾಮಾಂತರ ಪ್ರದೇಶದಿಂದ, ಗ್ರಾಮಾಂತರ ಪ್ರತಿಭೆಯನ್ನು ಹೆಕ್ಕಿ ಪರಿಚಯಿಸುವಲ್ಲಿ ಸಫಲವಾಗಿದೆ. ಜನಾಂಗದಲ್ಲಿ ಲೇಖಕರನ್ನು ಹುಟ್ಟು ಹಾಕುವ ಮಾಧ್ಯಮವಾಗಿದೆ. ಕಾಲ ಕಂಡು ಕಾಣೋಣರಾಗಿರುವ ಹಿರಿಯರನ್ನು ಸ್ಮರಿಸುವ ಹಾಗೂ ಕಿರಿಯರಿಗೆ ಮಾರ್ಗದರ್ಶನದ ಪತ್ರಿಕೆಯಾಗಿದೆ. ಕೊಡಗಿನಲ್ಲಿ ಅರೆಭಾಷಿಕ ಗೌಡ ಜನಾಂಗವೊಂದಿದೆ ಎನ್ನುವುದನ್ನು ಹೊರಜಗತ್ತಿಗೆ ಸಾರಿ ಪ್ರಚುರಪಡಿಸುತ್ತಿರುವ ಮಾಧ್ಯಮವಾಗಿದೆ. ಚಿಕ್ಕ ಪುಟ್ಟ ಬರಹಗಾರರಿಗೆ ತಮ್ಮ ಪ್ರತಿಭೆಯನ್ನು ಹೊರಸೂಸಲು ಅತ್ಯುತ್ತಮ ಮಾಧ್ಯಮವಾಗಿದೆ.

ಆದರೆ ಯಾವುದೇ ಪತ್ರಿಕೆಯನ್ನು ಜಾಹೀರಾತು, ಶುಭಾಶಯಗಳು ಇಲ್ಲದೆ ನಡೆಸುವುದು ಮಹಾ ಮಹಾ ದುಸ್ತರದ ಕೆಲಸವಾಗಿದೆ. ಅಭಿಮಾನದ ಜನತೆಯನ್ನು ನಂಬಿ, ಜನತೆಯ ಏಳ್ಗೆಯನ್ನು ಬಯಸಿ, **21**ನೇ ಶತಮಾನಕ್ಕೆ ಕಾಲಿಕ್ಕುವ ಮೊದಲು ಜನಾಂಗದ ಪರವಾಗಿ ಹೊರಬಂದ ಪತ್ರಿಕೆಯೇ ಈ ಕೊಡಗು ಸಂಗಾತಿ.

ಸಂಗಾತಿಯು ತನ್ನೆಲ್ಲ ಕಷ್ಟ ಕಾರ್ಪಣ್ಯಗಳನ್ನು ಮರೆತು ಇಲ್ಲಿಯ ತನಕ ಧೈರ್ಯವಾಗಿ ಯಾವುದೇ ರೀತಿಯಲ್ಲಿ ಎದೆಗುಂದದೆ ನಿರಂತರವಾಗಿ ಹೊರಬಂದಿದೆ.

ಪ್ರಿಯ ಚಂದದಾರರಲ್ಲಿ ಸಾಕಷ್ಟು ಜನ ನವೀಕರಣಗೊಳಿಸದೆ ಇರುತ್ತಾರೆ. ಅಂತಹವರು ದಯವಿಟ್ಟು ಶೀಘ್ರವಾಗಿ ಚಂದಾ ಹಣವನ್ನು ಕಳುಹಿಸಿ ನವೀಕರಣ ಮಾಡಿಕೊಳ್ಳುವಂತೆ ವಿನಂತಿ. ಕಳೆದ ವರ್ಷ ಸುಮಾರು **50** ಸಾವಿರದಷ್ಟು ನಷ್ಟವನ್ನು ಅನುಭವಿಸಿದೆ. ಈಗಲೂ ಸಹ **28-2-99** ತನಕ ಸುಮಾರು 60 ಸಾವಿರದಷ್ಟು ನಷ್ಟದ ಹಾದಿಯಲ್ಲಿದೆ. ಮಹಾಜನತೆ ಮತ್ತು ಓದುಗರು ಇದನ್ನು ಗಂಭೀರವಾಗಿ ಮನಗಾಣಬೇಕೆಂದು ನನ್ನ ಕಳಕಳಿಯ ಮನವಿಯಾಗಿದೆ. ನಿರಂತರ ನಷ್ಟದ ಹಾದಿಯಲ್ಲಿರುವ ಪತ್ರಿಕೆಯನ್ನು ನಡೆಸುವುದಾದರೂ ಹೇಗೆ ನೀವೆ ಹೇಳಿ ?

ಜನತೆ ನವೀಕರಣವನ್ನು ಮತ್ತು ಜಾಹೀರಾತುಗಳನ್ನು ನೀಡಿ ಸಹಕರಿಸುವಂತೆ ಇನ್ನೊಮ್ಮೆ ಕೋರಿಕೆ ಜನಾಂಗದ ಹಿತಚಿಂತಕರು, ಪ್ರಜ್ಞಾವಂತರು, ಸ್ಥಿತಿವಂತರೂ, ಬಡವ ಬಲ್ಲಿದರು, ಪತ್ರಿಕಾ ಪ್ರೇಮಿಗಳು, ವ್ಯಾಪಾರಸ್ಥರು, ಜನಾಂಗ ಪ್ರೇಮಿಗಳು ಮತ್ತು ಮೇಲಾಗಿ ಗೌಡ ಸಮಾಜ, ವಿದ್ಯಾ ಸಂಸ್ಥೆ, ಗೌಡ ಅಕಾಡೆಮಿ, ಮಹಿಳಾ ಒಕ್ಕೂಟ ಹಾಗೂ ಇತರೆ ಯುವ ಮಂಡಳಿಗಳು ಈ ಕೊಡಗು ಸಂಗಾತಿಯ ಮನವಿಯನ್ನು ಗಂಭೀರವಾಗಿ ಪರಿಗಣಿಸಿ ಚಿಂತಿಸುವಂತೆ ಜನತೆಯಲ್ಲಿ ವಿನಂತಿಸಿಕೊಳ್ಳುತ್ತೇನೆ.

—ಸಂಪಾದಕಿ : ಪಟ್ಟಡ ಶೀಲಾಮಣಿ

Printed by M.K. Thammaiah and Published by Kodagu Sangathi on behalf of Pattada P. Sheelamani and Printed at ASHIRWAD PRINTERS, 180/A, 6th Main, Vinayakanagar, Mysore - 12. Published at Mysore, Editor PATTADA P. SHEELAMANI, No: 35, 1st Cross, 4th Block ( Near Divisional Telephone Office), Jayalakshmipuram, Mysore - 570 012 ✆ 516771